# ಅಧ್ಯಾಯ–೧೧

# ಇತರ ಇಲಾಖೆಗಳು

ಸುಖೀ ರಾಜ್ಯ ಸ್ಥಾಪನೆಯನ್ನು ಬಯಸುವ ಆಡಳಿತರೂಢ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಹಲವು ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿರುತ್ತವೆ. ನಿರಂತರವಾದ ಆರ್ಥಿಕ ಪ್ರಗತಿಗೆ ಭದ್ರ ತಳಪಾಯವನ್ನಿಡಲು ಆರ್ಥಿಕ ಸ್ಥಿರತೆಯನ್ನು ಸಾಧಿಸಲು, ಸಾಮಾಜಿಕ ನ್ಯಾಯ ಸ್ಥಾಪನೆಯತ್ತ ಹೆಜ್ಜೆಗಳನ್ನಿಡಲು ಹಾಗೂ ಆಗಿಂದಾಗ್ಗೆ ಉದ್ಭವಿಸುವ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಯೋಜನೆಯು ಅತ್ಯವಶ್ಯಕವೆನಿಸಿದೆ. ಈ ಯೋಜನೆಗಳನ್ನು ಸರ್ಕಾರದ ವಿವಿಧ ಇಲಾಖೆಗಳು, ಮಂಡಳಿ, ನಿಗಮ ಮೊದಲಾದವುಗಳ ಮೂಲಕ ಕಾರ್ಯರೂಪಕ್ಕೆ ತರಲಾಗುತ್ತದೆ. ಈ ಗ್ಯಾಸೆಟಿಯರ್‌ನ ಇತರ ಕೆಲವು ಅಧ್ಯಾಯಗಳಲ್ಲಿ ಕೆಲವೊಂದು ಇಲಾಖೆಗಳ ಕಾರ್ಯ ಚಟುವಟಿಕೆಗಳ ಬಗೆಗೆ ಪ್ರಸ್ತಾಪಿಸಲಾಗಿದೆ. ಆದರೆ ಪ್ರಸ್ತುತ ಅಧ್ಯಾಯದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿನ ವಿವಿಧ ಇಲಾಖೆಗಳು, ಮಂಡಳಿ ಹಾಗೂ ನಿಗಮಗಳ ಸ್ಥಾಪನೆ, ಕಛೇರಿಯ ಸಿಬ್ಬಂದಿ ಸ್ವರೂಪ, ಆಡಳಿತ ವ್ಯಾಪ್ತಿ, ಅವುಗಳ ಧ್ಯೇಯೋದ್ದೇಶಗಳು ಇತ್ಯಾದಿಗಳ ಬಗೆಗೆ ಆಯಾ ಕಛೇರಿಗಳು ಒದಗಿಸಿದ ಮಾಹಿತಿ ಆಧರಿಸಿ, ಸಂಕ್ಷಿಪ್ತ ಪರಿಚಯ ಮಾಡಿಕೊಡಲಾಗಿದೆ. ಅಧಿಕಾರಿಗಳು, ಅಧ್ಯಯನಕಾರರು ಹಾಗೂ ಸಾರ್ವಜನಿಕರು ಜಿಲ್ಲೆಯಲ್ಲಿನ ಆಡಳಿತ ಯಂತ್ರದ ಬಗೆಗೆ ಸ್ಥೂಲ ಪರಿಚಯ ಮಾಡಿಕೊಳ್ಳಲು ಇಲ್ಲಿನ ಮಾಹಿತಿಗಳು ನೆರವಾಗುತ್ತವೆ. ಸರ್ಕಾರದ ಇಲಾಖಾ ಕಛೇರಿಗಳು ಸಾಮಾನ್ಯವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಒಂದೇ ರೀತಿ ಇರುವುದು ಸಹಜವಾಗಿದ್ದರೂ, ಪ್ರಾದೇಶಿಕ ಅಗತ್ಯ ಮತ್ತಿತರ ಉದ್ದೇಶಗಳೊಂದಿಗೆ ಕೆಲವೊಂದು ಇಲಾಖಾ ಕಛೇರಿಗಳು ಕೆಲವು ಜಿಲ್ಲೆಗಳಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ಗಮನಿಸಬೇಕಾಗಿದೆ.

## ಅಬಕಾರಿ ಇಲಾಖೆ

ಪಾನ ನಿರೋಧವನ್ನು ರದ್ದುಪಡಿಸಿ, ಮದ್ಯ ತಯಾರಿಕೆ, ಮಾರಾಟ ಇತ್ಯಾದಿಗಳನ್ನು ಕಾನೂನಿನಂತೆ ನಿಯಂತ್ರಿಸುವುದು ಮೊದಲಾದ ಉದ್ದೇಶಗಳೊಂದಿಗೆ ೧೯೯೭ರಲ್ಲಿ ಅಬಕಾರಿ ಉಪ ಆಯುಕ್ತರ ಕಛೇರಿ ಚಾಮರಾಜನಗರ ಜಿಲ್ಲೆಯಲ್ಲಿ ಆರಂಭಗೊಂಡಿತು. ಅದಕ್ಕೂ ಮೊದಲು ಚಾಮರಾಜನಗರ ಜಿಲ್ಲೆಯು ಅವಿಭಜಿತ ಮೈಸೂರು ಜಿಲ್ಲೆಗೆ ಸೇರಿದ್ದು, ಅಬಕಾರಿ ಅಧೀಕ್ಷಕರ ಕಾರ್ಯಾಲಯವಾಗಿತ್ತು. ಪ್ರಸ್ತುತ ಚಾಮರಾಜನಗರ ಜಿಲ್ಲೆಯು ಮೈಸೂರು ಜಿಲ್ಲೆಯಿಂದ ೧೯೯೭–೯೮ರಲ್ಲಿ ಪ್ರತ್ಯೇಕಗೊಂಡಿದೆ. ಅಬಕಾರಿ ಉಪ ಆಯುಕ್ತರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಇವರ ನೆರವಿಗೆ ಅಬಕಾರಿ

ಉಪಅಧೀಕ್ಷಕ, ಕಛೇರಿ ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕ, ಶೀಘ್ರಲಿಪಿಗಾರರು, ದ್ವಿತೀಯ ದರ್ಜೆ ಸಹಾಯಕ ಮತ್ತಿತರ ಸಿಬ್ಬಂದಿಗಳಿದ್ದಾರೆ. ಈ ಜಿಲ್ಲಾ ಕಚೇರಿ ವ್ಯಾಪ್ತಿಯಲ್ಲಿ ನಾಲ್ಕು ವಲಯ (ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ ಹಾಗೂ ಯಳಂದೂರು) ಕಛೇರಿಗಳಿದ್ದು, ಅಬಕಾರಿ ನಿರೀಕ್ಷಕರು ಆಯಾ ವಲಯ ಕಚೇರಿಗಳ ಮುಖ್ಯಸ್ಥರಾಗಿರುತ್ತಾರೆ. ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ ಹಾಗೂ ಯಳಂದೂರು ತಾಲೂಕುಗಳಲ್ಲಿ ಅಬ್ಕಾರಿ ಉಪ ನಿರೀಕ್ಷಕರ (ಜಾರಿ ಮತ್ತು ತನಿಖೆ) ಕಛೇರಿಗಳಿದ್ದು, ಅಬ್ಕಾರಿ ಉಪ ನಿರೀಕ್ಷಕರು ಆಯಾ ತಾಲೂಕಿನಲ್ಲಿ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಒಂದು ಉಪವಿಭಾಗದ ಕಛೇರಿಯಿದ್ದು, ಅಬ್ಕಾರಿ ಉಪ ಅಧೀಕ್ಷಕರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ ಹಾಗೂ ಒಂದು ಕರ್ನಾಟಕ ರಾಜ್ಯ ಪಾನೀಯ ನಿಗಮವಿದ್ದು, ಅಬ್ಕಾರಿ ಉಪ ಅಧೀಕ್ಷಕರು ಇದರ ಮುಖ್ಯಸ್ಥರಾಗಿರುತ್ತಾರೆ.

ಜಿಲ್ಲೆಯಲ್ಲಿ ಅಬಕಾರಿ ರಾಜಸ್ವ ವಸೂಲಿ, ಮದ್ಯ ಮಾರಾಟದ ಅಂಗಡಿಗಳಿಗೆ ಲೈಸೆನ್ಸ್ ನೀಡುವುದು, ಮದ್ಯ ಪಾನೀಯಗಳ ಗುಣಮಟ್ಟ ಪರಿಶೀಲನೆ, ಅಕ್ರಮ ಮದ್ಯ, ಸಾರಾಯಿ ತಯಾರಿಕಾ ಘಟಕಗಳ ಮೇಲೆ ದಾಳಿ ಮಾಡುವುದು, ಅಕ್ರಮ ಮದ್ಯ ಮಾರಾಟದ ವಿರುದ್ಧ ಕ್ರಮ ಜರುಗಿಸುವುದು, ಮೊಕದ್ದಮೆಗಳ ವಿಚಾರಣೆ ಮೊದಲಾದವು ಈ ಕಛೇರಿಯ ಮುಖ್ಯ ಉದ್ದೇಶಗಳಾಗಿವೆ.

ಗ್ರಾಹಕರಿಗೆ ಕಡಿಮೆ ಬೆಲೆಗೆ ಗುಣಮಟ್ಟದ ಮದ್ಯಗಳನ್ನು ದೊರಕಿಸುವುದು ಹಾಗೂ ಸುಂಕ ಪಾವತಿಸದ ಅನಧಿಕೃತ ಮದ್ಯ ಮಾರಾಟ ಚಟುವಟಿಕೆಯನ್ನು ನಿಯಂತ್ರಿಸುವ ಸಲುವಾಗಿ ರಾಜ್ಯ ಸರ್ಕಾರವು ಪಾನೀಯ ನಿಗಮವನ್ನು ಸ್ಥಾಪಿಸಿದೆ. ಅಬಕಾರಿ ಕಾಯ್ದೆ, ನಾರ್ಕೋಟಿಕ್ ಕಾಯಿದೆ, ಓವೆಯಂ ಕಾಯಿದೆ ಮೊದಲಾದ ನಿಯಮ–ಅಧಿನಿಯಮಗಳನ್ನು ತನ್ನ ಕಾರ್ಯದಲ್ಲಿ ಅನುಸರಿಸುತ್ತದೆ. ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ), ಮೈಸೂರು ವಿಭಾಗ, ಮೈಸೂರು ಅವರು ಈ ಕಛೇರಿಯ ಮೇಲಧಿಕಾರಿಯಾಗಿರುತ್ತಾರೆ.

## ಅರಣ್ಯ ಇಲಾಖೆ

ಅರಣ್ಯಗಳ ನಿರ್ವಹಣೆ, ವನ್ಯಜೀವಿ ಸಂರಕ್ಷಣೆ, ಬಂಜರು ಭೂಮಿ ಹಾಗೂ ಕೃಷಿ ಪ್ರದೇಶದಲ್ಲಿ ಮರ ಬೆಳೆಸುವುದೂ ಸೇರಿದಂತೆ ಸಾಮಾಜಿಕ ವನ ನಿರ್ಮಾಣ ಮಾಡುವುದು, ಆ ಮೂಲಕ ಉರುವಲು ಸೌದೆ, ಹಸಿರುಗೊಬ್ಬರ ಬೇಡಿಕೆ ಪೂರೈಸುವುದು ಮತ್ತಿತರ ಧ್ಯೇಯೋದ್ದೇಶಗಳೊಂದಿಗೆ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಾಮರಾಜನಗರ ವೃತ್ತ, ಚಾಮರಾಜನಗರ, ಡಿಸೆಂಬರ್ ಒಂದು, ೨೦೦೧ ರಿಂದ ಕಾರ್ಯರೂಪಕ್ಕೆ ಬಂದಿರುತ್ತದೆ. ಇದಕ್ಕೂ ಪೂರ್ವದಲ್ಲಿ ಜುಲೈ ೨೧, ೧೯೯೭ ರಿಂದಲೇ ಮೈಸೂರನ್ನು ಕೇಂದ್ರಸ್ಥಾನವನ್ನಾಗಿಸಿಕೊಂಡು ಅಸ್ತಿತ್ವಕ್ಕೆ ಬಂದಿತ್ತು. ಅರಣ್ಯ ಸಂರಕ್ಷಣಾಧಿಕಾರಿಗಳು, ಈ ಕಛೇರಿಯ ಮುಖ್ಯಸ್ಥರಾಗಿದ್ದು, ಬಿ.ಆರ್.ಟಿ. ವನ್ಯಜೀವಿ ವಿಭಾಗ, ಚಾಮರಾಜನಗರ, ಕೊಳ್ಳೇಗಾಲ ಪ್ರಾದೇಶಿಕ ವಿಭಾಗ, ಕೊಳ್ಳೇಗಾಲ, ಕಾವೇರಿ ವನ್ಯಜೀವಿ ವಿಭಾಗ, ಕನಕಪುರ ಹಾಗೂ ಸಾಮಾಜಿಕ ಅರಣ್ಯ ವಿಭಾಗ, ಚಾಮರಾಜನಗರ, ಈ ವಿಭಾಗಗಳು ಎಂಟು ಉಪವಿಭಾಗಗಳು ಹಾಗೂ ೨೦ ವಲಯಗಳ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಇವರಿಗೆ ಆಡಳಿತದಲ್ಲಿ ನೆರವಾಗಲು ನಾಲ್ಕು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಒಂಭತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಮೂವರು ಪತ್ರಾಂಕಿತ ವ್ಯವಸ್ಥಾಪಕರು, ೨೦ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತಿತರ ಅಧಿಕಾರಿ ಸಿಬ್ಬಂದಿಗಳು ಇದ್ದಾರೆ. ಕರ್ನಾಟಕ ಅರಣ್ಯ ಕಾಯಿದೆ ೧೯೬೩, ೧೯೬೪, ೧೯೭೬, ೧೯೭೮, ೧೯೮೦, ೧೯೮೩, ೧೯೮೪

ಹಾಗೂ ೧೯೮೭; ಅರಣ್ಯ ನಿಯಮಗಳು ೧೯೬೯, ೧೯೭೦, ೧೯೭೩, ೧೯೭೪, ೧೯೭೬, ೧೯೭೭, ೧೯೭೯, ೧೯೮೦, ೧೯೮೭ ಹಾಗೂ ೧೯೯೪; ವನ್ಯಜೀವಿ ಸಂರಕ್ಷಣಾ ಕಾಯ್ದೆ ೧೯೭೨ (ಸೆಂಟ್ರಲ್ ಆಕ್ಟ್) ವೈಲ್ಡ್‌ಲೈಫ್ ಟ್ರೀ ಪ್ರಿಸರ್ವೇಷನ್ ಆಕ್ಟ್ ೧೯೭೬ ಮತ್ತಿತರ ನಿಯಮಗಳನ್ನು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಅನುಸರಿಸಲಾಗುತ್ತದೆ.

ಈ ವೃತ್ತವು ೨,೫೯,೭೪೧ ಹೆ. ವಿಸ್ತೀರ್ಣ ಅರಣ್ಯ ಪ್ರದೇಶವನ್ನು ಒಳಗೊಂಡಿದ್ದು, ಬೆಲೆಬಾಳುವ ಶ್ರೀಗಂಧ, ಬೀಟೆ, ತೇಗ, ಹೊನ್ನೆ ಹಾಗೂ ಇತರೆ ಕಾಡುಜಾತಿಯ ಮರಗಳು ಹೇರಳವಾಗಿ ಲಭ್ಯವಿದೆ. ಹೇರಳವಾದ ಅರಣ್ಯ ಸಂಪತ್ತು ಇರುವ ಈ ಜಿಲ್ಲೆಯಲ್ಲಿ ವನ್ಯಪ್ರಾಣಿಗಳಾದ ಕಾಡಾನೆಗಳು, ಕಾಡುಕೋಣ, ಚಿರತೆ, ಹುಲಿ, ಜಿಂಕೆ ಮತ್ತಿತರ ಪ್ರಾಣಿಗಳ ಆವಾಸಸ್ಥಾನವಾಗಿರುತ್ತದೆ. ಈ ಕಛೇರಿಯ ವ್ಯಾಪ್ತಿಯಲ್ಲಿ ಎರಡು ರಕ್ಷಿತ ವನ್ಯಧಾಮಗಳಾದ ಬಿಳಿಗಿರಿರಂಗನಬೆಟ್ಟ ಹಾಗೂ ಕಾವೇರಿ ವನ್ಯಧಾಮಗಳಿದ್ದು, ಪ್ರವಾಸಿಗರ ನೆಚ್ಚಿನ ತಾಣವಾಗಿವೆ. ಈ ಕಛೇರಿಯ ವ್ಯಾಪ್ತಿಯಲ್ಲಿ ಬರುವ ವಿಭಾಗಗಳು, ಉಪವಿಭಾಗಗಳು ಮತ್ತು ವಲಯಗಳಲ್ಲಿ ಅರಣ್ಯ ಅಭಿವೃದ್ಧಿ ಕಾಮಗಾರಿಗಳಾದ ಕೆರೆ ನಿರ್ಮಾಣ, ಕೆರೆಹೂಳೆತ್ತುವುದು, ಗುಂಡಿ ತೆಗೆದು ನೆಡುತೋಪು ಬೆಳೆಸುವುದು, ಕಳ್ಳಬೇಟೆ ತಡೆಶಿಬಿರ, ಫೈರ್‌ವ್ಯೂಲೈನ್ ನಿರ್ಮಿಸುವುದು, ಆನೆ ತಡೆ ಕಂದಕ ನಿರ್ಮಿಸುವುದು ಮತ್ತಿತರ ಚಟುವಟಿಕೆಗಳಲ್ಲಿ ತೊಡಗಿರುತ್ತವೆ.

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ

ಕುಟುಂಬ ಕಲ್ಯಾಣ ಸೇವೆಗಳನ್ನೊಳಗೊಂಡಂತೆ ಸಾರ್ವಜನಿಕ ಆರೋಗ್ಯ ಪ್ರಾಮುಖ್ಯತೆಯ ವಿವಿಧ ರಾಷ್ಟ್ರೀಯ ಹಾಗೂ ರಾಜ್ಯ ಆರೋಗ್ಯ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಛೇರಿಯು ಚಾಮರಾಜನಗರದಲ್ಲಿ ೧೯ನೇ ಜೂನ್, ೧೯೯೮ ರಿಂದ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಅವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಅವರ ನೆರವಿಗೆ ಒಬ್ಬೊಬ್ಬ ಜಿಲ್ಲಾ ಲಸಿಕಾಧಿಕಾರಿ (ಆರ್.ಸಿ.ಹೆಚ್.), ಕುಟುಂಬ ಕಲ್ಯಾಣಧಿಕಾರಿ, ಜಿಲ್ಲಾ ಮಲೇರಿಯ ನಿರ್ಮೂಲನಾ ಅಧಿಕಾರಿ, ಜಿಲ್ಲಾ ಕುಷ್ಟರೋಗ ನಿರ್ಮೂಲನಾ ಅಧಿಕಾರಿ, ಜಿಲ್ಲಾ ಕ್ಷಯರೋಗ ನಿಯಂತ್ರಣ ಅಧಿಕಾರಿ, ಸರ್ವೇಲೆನ್ಸ್ ಅಧಿಕಾರಿ, ನಾಲ್ಕು ಮಂದಿ ತಾಲೂಕು ವೈದ್ಯಾಧಿಕಾರಿಗಳು, ಐದು ಮಂದಿ ದಂತ ವೈದ್ಯರು ೯೯ ಮಂದಿ ವೈದ್ಯಾಧಿಕಾರಿಗಳು, ಒಬ್ಬ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ, ಒಬ್ಬ ಮೈಕ್ರೋ ಬಯಾಲಿಜಿಸ್ಟ್, ಒಬ್ಬ ಸಹಾಯಕ ಆಡಳಿತಾಧಿಕಾರಿ, ಒಬ್ಬ ಉಪ ಆರೋಗ್ಯ ಶಿಕ್ಷಣಾಧಿಕಾರಿ, ಮತ್ತಿತರ ಒಟ್ಟು ೧೧೮೧ ಮಂದಿ ಅಧಿಕಾರಿ ಸಿಬ್ಬಂದಿ ಇದ್ದಾರೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ ಮತ್ತಿತರ ನಿಯಮ ಅಧಿನಿಯಮಗಳನ್ನು ದಿನನಿತ್ಯದ ಕಛೇರಿ ಕೆಲಸ ಕಾರ್ಯಗಳಲ್ಲಿ ಅನುಸರಿಸುತ್ತಿದೆ.

ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮ (ಆರ್.ಸಿ.ಹೆಚ್–II)ರಂತೆ ತಾಯಂದಿರ ಆರೋಗ್ಯ, ಮಕ್ಕಳ ಆರೋಗ್ಯ, ಹದಿಹರೆಯದವರ ಆರೋಗ್ಯ, ರಾಷ್ಟ್ರೀಯ ಕುಟುಂಬ ಕಲ್ಯಾಣ ಕಾರ್ಯಕ್ರಮಗಳು; ಸಮಗ್ರ ರೋಗಗಳ ಕಣ್ಗಾವಲು ಕಾರ್ಯಕ್ರಮ (ಐ.ಡಿ.ಎಸ್.ಪಿ) ದಂತೆ, ಕರುಳುಬೇನೆ ನಿಯಂತ್ರಣ, ಡೆಂಗ್ಯೂ ಜ್ವರ ನಿಯಂತ್ರಣ, ಮೆದುಳು ಜ್ವರ ನಿಯಂತ್ರಣ, ವೈರಲ್ ಹೆಪ್ಯಾಟೈಟೀಸ್, ಶಾಲಾ ಆರೋಗ್ಯ ಕಾರ್ಯಕ್ರಮ, ರಾಷ್ಟ್ರೀಯ ಪರಿಷ್ಕೃತ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ, ರಾಷ್ಟ್ರೀಯ ಕುಷ್ಟರೋಗ ನಿರ್ಮೂಲನ

ಕಾರ್ಯಕ್ರಮ, ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮ, ರಾಷ್ಟ್ರೀಯ ಹೆಚ್.ಪಿ.ವಿ/ಏಡ್ಸ್ ನಿಯಂತ್ರಣ ಕಾರ್ಯಕ್ರಮ, ರಾಷ್ಟ್ರೀಯ ಲೈಂಗಿಕ ರೋಗಗಳ ನಿಯಂತ್ರಣ ಕಾರ್ಯಕ್ರಮ, ರಾಷ್ಟ್ರೀಯ ಗಳಗಂಡ ರೋಗ ನಿಯಂತ್ರಣ ಕಾರ್ಯಕ್ರಮ.

ರಾಷ್ಟ್ರೀಯ ಅಯೋಡಿನ್ ಕೊರತೆಯಿಂದ ಉಂಟಾಗುವ ದುಷ್ಪರಿಣಾಮಗಳ ನಿಯಂತ್ರಣ ಕಾರ್ಯಕ್ರಮ, ರಾಷ್ಟ್ರೀಯ ಗಿನಿಯವರ್ಮ್ (ನಾರು ಹುಣ್ಣು) ನಿರ್ಮೂಲನಾ ಕಾರ್ಯಕ್ರಮ, ರಾಷ್ಟ್ರೀಯ ಫೈಲೇರಿಯಾ ನಿಯಂತ್ರಣ ಕಾರ್ಯಕ್ರಮ ಮೊದಲಾದ ಆರೋಗ್ಯ ಕಲ್ಯಾಣ ಕಾರ್ಯಕ್ರಮಗಳನ್ನು ಈ ಇಲಾಖೆಯು ಅನುಷ್ಠಾನಗೊಳಿಸುತ್ತಿದೆ. ಜಿಲ್ಲೆಯಲ್ಲಿ ನಾಲ್ಕು ತಾಲೂಕುಗಳಲ್ಲಿ, ತಾಲೂಕು ಆಸ್ಪತ್ರೆಗಳಿದ್ದು, ತಾಲೂಕು ಆರೋಗ್ಯಾಧಿಕಾರಿಗಳು ಇವುಗಳ ಮುಖ್ಯಸ್ಥರಾಗಿರುತ್ತಾರೆ ಹಾಗೂ ತಾಲೂಕು ಆಡಳಿತ ಅಧಿಕಾರ ಹೊಂದಿರುತ್ತಾರೆ. ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು ರವರು ಈ ಕಛೇರಿಯ ತತ್‌ಕ್ಷಣದ ಮೇಲಧಿಕಾರಿಗಳಾಗಿದ್ದಾರೆ.

## ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ

ಸಾರ್ವಜನಿಕ ವಿತರಣಾ ಪದ್ಧತಿಯಡಿ ನ್ಯಾಯಬೆಲೆ ಅಂಗಡಿಗಳ ಮೂಲಕ ಜಿಲ್ಲೆಯ ಅರ್ಹ ನಾಗರೀಕರಿಗೆ ದಿನನಿತ್ಯದ ಅಗತ್ಯ ವಸ್ತುಗಳನ್ನು ಪೂರೈಸುವ ಉದ್ದೇಶದಿಂದ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ದಿ. ೧–೪–೧೯೮೮ ರಿಂದ ಕಾರ್ಯನಿರ್ವಹಿಸುತ್ತಿದೆ. ಉಪನಿರ್ದೇಶಕರು, ಈ ಇಲಾಖೆಯ ಮುಖ್ಯಸ್ಥರಾಗಿದ್ದು, ಚಾಮರಾಜನಗರ ಜಿಲ್ಲಾ ವ್ಯಾಪ್ತಿ ಅಧಿಕಾರವನ್ನು ಹೊಂದಿರುತ್ತಾರೆ. ಅವರಿಗೆ ವ್ಯವಸ್ಥಾಪಕರು, ಲೆಕ್ಕ ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ಮತ್ತಿತರ ಅಧಿಕಾರಿ ಸಿಬ್ಬಂದಿ ಆಡಳಿತದಲ್ಲಿ ನೆರವಿಗಿದ್ದಾರೆ.

ಪಿ.ಡಿ.ಎಸ್ (P.D.S.) ಕಂಟ್ರೋಲ್ ಆರ್ಡರ್ ೧೯೯೨, ಗ್ಯಾಸ್ ಕಂಟ್ರೋಲ್ ಆರ್ಡರ್ ೨೦೦೦, ಎಡಿಬಲ್ ಆಯಿಲ್ ಪ್ಯಾಕೇಜಿಂಗ್ ಆರ್ಡರ್ ೧೯೯೮, ಕರ್ನಾಟಕ ಎಸೆನ್ಷಿಯಲ್ ಕಮಾಡಿಟಿ ಲೈಸೆನ್ಸಿಂಗ್ ಆ್ಯಕ್ಟ್ ೧೯೮೬, ಮೋಟಾರು ಸ್ಪಿರಿಟ್ ಅಂಡ್ ಹೈಸ್ಪೀಡ್ ಡೀಸೆಲ್ ರೆಗ್ಯುಲೇಷನ್ ಆಫ್ ಸಪ್ಲೈ ಆಂಡ್ ಡಿಸ್ಟ್ರಿಬ್ಯೂಷನ್ ಅಂಡ್ ಪ್ರಿವೆನ್ಷನ್ ಆಫ್ ಮಾಲ್‌ಪ್ರಾಕ್ಟೀಸ್ ಆರ್ಡರ್ ೧೯೯೮ ಮೊದಲಾದ ನಿಗದಿತ ನಿಯಮ, ಅಧಿನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತಿದೆ.

ಜಿಲ್ಲೆಯ ಕಾರ್ಯನಿರ್ವಹಣಾಧಿಕಾರಿಗಳು, ತಾಲೂಕು ಪಂಚಾಯ್ತಿ–ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ ಹಾಗೂ ಯಳಂದೂರು ಮತ್ತು ಚಾಮರಾಜನಗರ–ಗುಂಡ್ಲುಪೇಟೆ, ಕೊಳ್ಳೇಗಾಲ ಹಾಗೂ ಯಳಂದೂರು ತಾಲೂಕುಗಳ ತಹಸೀಲ್ದಾರ್‌ಗಳು ಆಯಾ ತಾಲೂಕು ಹಂತದಲ್ಲಿ ಇಲಾಖಾ ಕಾರ್ಯಗಳನ್ನು ಅನುಷ್ಠಾನಗೊಳಿಸುವ ಅಧಿಕಾರಿಗಳಾಗಿರುತ್ತಾರೆ.

ವಿವಿಧ ವರ್ಗದ ಪಡಿತರ ಚೀಟಿಗಳಿಗೆ ಫಲಾನುಭವಿಗಳನ್ನು ಗುರುತಿಸಿ ಪಡಿತರ ಚೀಟಿ ನೀಡುವುದು, ಅನರ್ಹ ಬಿ.ಪಿ.ಎಲ್.ದಾರರನ್ನು ಗುರುತಿಸಿ ಪಡಿತರ ಪದಾರ್ಥ ನಿಯಂತ್ರಿಸುವ, ಸರ್ಕಾರವು ನಿಗದಿಪಡಿಸಿದ ದರ ಹಾಗೂ ಪ್ರಮಾಣದಂತೆ ಆಹಾರ ಧಾನ್ಯ, ಸಕ್ಕರೆ ಮತ್ತು ಸೀಮೆಎಣ್ಣೆಯನ್ನು ವಿವಿಧ ವರ್ಗದ ಕಾರ್ಡುದಾರರಿಗೆ

ಎತ್ತುವಳಿ ಮಾಡಿ ವಿತರಿಸುವುದು, ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ನ್ಯಾಯಬೆಲೆ ಅಂಗಡಿಗಳ ಸ್ಥಾಪನೆ ಮತ್ತು ನಿಯಂತ್ರಣ, ಮುಕ್ತ ಮಾರುಕಟ್ಟೆಯಲ್ಲಿ ಅಗತ್ಯ ವಸ್ತುಗಳು ಸುಲಭ ದರದಲ್ಲಿ ದೊರಕುವಂತೆ ನಿಗಾವಹಿಸುವುದು, ಪೆಟ್ರೋಲ್ ಮತ್ತು ಡೀಸೆಲ್‌ಗಳು, ಅಡುಗೆ ಅನಿಲ ಸಿಲಂಡರ್‌ಗಳು ಗ್ರಾಹಕರಿಗೆ ದೊರಕುವಂತೆ ವ್ಯವಸ್ಥೆ ಮಾಡುವುದು, ಲೆವಿಸಂಗ್ರಹಣೆ, ಮತ್ತಿತರ ಚಟುವಟಿಕೆಯಲ್ಲಿ ಇಲಾಖೆಯು ತೊಡಗಿದೆ. ಆಯುಕ್ತರು, ಆಹಾರ ನಾಗರೀಕ, ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ಹಾಗೂ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇವರು ತತ್‌ಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಜಿಲ್ಲೆಯ ಎಲ್ಲಾ ಸರ್ಕಾರಿ ಹಾಗೂ ಸರ್ಕಾರೇತರ ಕಛೇರಿಗಳಲ್ಲಿ ಕನ್ನಡ ಭಾಷೆಯ ಬಳಕೆ, ಸಂಸ್ಕೃತಿ ಪ್ರಚಾರ ಮತ್ತು ಕನ್ನಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಯು ಚಾಮರಾಜನಗರದಲ್ಲಿ ೧೯೯೮ರಲ್ಲಿ ಕಾರ್ಯಾರಂಭಗೊಂಡಿದೆ. ಸಹಾಯಕ ನಿರ್ದೇಶಕರು ಈ ಕಛೇರಿಯ ಮುಖ್ಯಾಧಿಕಾರಿಗಳಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ.

ಕನ್ನಡ ಅಭಿವೃದ್ಧಿ ಕಾರ್ಯಕ್ರಮದಡಿ ಸರ್ಕಾರಿ ನೌಕರರಿಗೆ, ಅಧಿಕಾರಿಗಳಿಗೆ ಆಡಳಿತದಲ್ಲಿ ಕನ್ನಡ ತರಬೇತಿ, ನ್ಯಾಯಾಲಯದಲ್ಲಿ ಕನ್ನಡ ಬಳಕೆಯ ಬಗ್ಗೆ ತರಬೇತಿ, ಕನ್ನಡೇತರರಿಗೆ ಕನ್ನಡ ಕಲಿಸುವುದು, ಜಿಲ್ಲೆಯ ಕಲಾವಿದರನ್ನು ಗುರುತಿಸುವುದು, ಜಿಲ್ಲಾ ಮಟ್ಟದಲ್ಲಿ ಸಾಂಸ್ಕೃತಿಕ ಚಟುವಟಿಕೆ ಮತ್ತು ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು, ವಿಶೇಷ ಘಟಕ ಯೋಜನೆಯಡಿ ಕಲಾವಿದರನ್ನು ಪ್ರೋತ್ಸಾಹಿಸುವುದು, ಚಾಮರಾಜನಗರದಲ್ಲಿ ಜಿಲ್ಲಾ ರಂಗಮಂದಿರ (₹ ನಾಲ್ಕು ಕೋಟಿ ವೆಚ್ಚದಲ್ಲಿ ನಿರ್ಮಾಣ, ಕೊಳ್ಳೇಗಾಲದಲ್ಲಿ ಸುವರ್ಣ ಕರ್ನಾಟಕ ಭವನ (₹ ೧.೨೫ ಕೋಟಿಗಳು) ನಿರ್ಮಾಣ ಹಾಗೂ ಗುಂಡ್ಲುಪೇಟೆಯಲ್ಲಿ ಗಡಿ ಭವನ (₹ ೩೬ ಲಕ್ಷಗಳು) ನಿರ್ಮಾಣ ಮುಂತಾದ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿದೆ.

ಕಲಾವಿದರ, ಸಾಹಿತಿಗಳ ವೈದ್ಯಕೀಯ ವೆಚ್ಚ ಮರುಪಾವತಿ, ಪರಿಶಿಷ್ಟ ಜಾತಿ/ಪಂಗಡದ ಕಲಾವಿದರಿಗೆ ತಮ್ಮ ಕಲೆಯನ್ನು ಪ್ರದರ್ಶಿಸಲು ಧನಸಹಾಯ ಮಾಡುವುದು, ಸ್ಥಳೀಯ ಕಲಾವಿದರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಲು ಅವಕಾಶ ಮಾಡಿಕೊಡುವುದು, ಅದಕ್ಕಾಗಿ ಸಂಭಾವನೆ ನೀಡುವುದು, ಜನಪದ ಕಲಾವಿದರಿಗೆ ಗೌರವಧನ ಹಾಗೂ ಮಾಸಾಶನ ದೊರಕಿಸಿಕೊಡುವುದು, ಬಾಲ ಪ್ರತಿಭೆ, ಕಿಶೋರ ಪ್ರತಿಭಾ ಸ್ಪರ್ಧೆ, ಯುವ ಪ್ರತಿಭಾ ಕಾರ್ಯಕ್ರಮ, ಪುಸ್ತಕ ಮಾರಾಟ ಮುಂತಾದ ಚಟುವಟಿಕೆಗಳಲ್ಲಿ ನಿರತವಾಗಿದೆ. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು, ಅವರು ಈ ಕಛೇರಿಯ ತತ್‌ಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

## ಕಾನೂನು ಮಾಪನಶಾಸ್ತ್ರ ಇಲಾಖೆ

ವ್ಯಾಪಾರ ಸಂಸ್ಥೆಗಳು, ಕೈಗಾರಿಕಾ ಸಂಸ್ಥೆಗಳಲ್ಲಿ ಉಪಯೋಗಿಸುವ ತೂಕ, ಅಳತೆ ಮತ್ತು ತೂಕದ ಸಾಧನಗಳನ್ನು ಪರಿಶೀಲಿಸಿ, ವಾರ್ಷಿಕ ಮುದ್ರೆ ಹಾಕಿ ಸತ್ಯಾಪನೆ ಮಾಡುವುದು, ತೂಕ ಮತ್ತು ಅಳತೆಗಳಲ್ಲಿನ ನಿಖರತೆ ಕಾಪಾಡುವುದು, ಮೆಟ್ರಿಕ್ ಪದ್ಧತಿ ಜಾರಿಗೊಳಿಸುವುದು, ಗ್ರಾಹಕರ ಹಿತರಕ್ಷಣೆ ಮಾಡುವುದು ಮೊದಲಾದ ಧ್ಯೇಯೋದ್ದೇಶಗಳೊಂದಿಗೆ ಚಾಮರಾಜನಗರದಲ್ಲಿ ೨೦೦೨ರಲ್ಲಿ ಕಾನೂನು ಮಾಪನಶಾಸ್ತ್ರ

ಸಹಾಯಕ ನಿಯಂತ್ರಕರ ಕಛೇರಿಯನ್ನು ಆರಂಭಿಸಲಾಯಿತು. ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವ ಈ ಕಛೇರಿಯ ಮುಖ್ಯಸ್ಥರಾಗಿ ಸಹಾಯಕ ನಿಯಂತ್ರಕರಿದ್ದು, ಅವರ ನೆರವಿಗೆ ಪ್ರಥಮ ದರ್ಜೆ ಸಹಾಯಕರು, ದೈಹಿಕ ಸಹಾಯಕರು, ಮತ್ತಿತರ ಸಿಬ್ಬಂದಿ ಇದ್ದಾರೆ. ತೂಕ ಮತ್ತು ಅಳತೆ ಮಾಪನಗಳನ್ನು ಕಾಲಕಾಲಕ್ಕೆ ಪರಿಶೀಲಿಸಿ ಮುದ್ರೆ ಹಾಕುವುದು, ಪೊಟ್ಟಣ ಸಾಮಗ್ರಿಗಳ ಮೇಲೆ ಕಾನೂನುಬದ್ಧವಾಗಿ ಇರಬೇಕಾದ ಘೋಷಣೆಗಳನ್ನು ಪರಿಶೀಲಿಸುವುದು, ಕಾನೂನು ಉಲ್ಲಂಘಿಸುವ ವರ್ತಕರ ವಿರುದ್ಧ ಮೊಕದ್ದಮೆ ಹೂಡಿ ದಂಡ ವಿಧಿಸುವುದು ಮೊದಲಾದ ಕಾರ್ಯಗಳನ್ನು ಈ ಕಛೇರಿ ನಿರ್ವಹಿಸುತ್ತದೆ. ಈ ಸಂಬಂಧ ತನ್ನ ಕಛೇರಿ ವ್ಯವಹಾರದಲ್ಲಿ ಪ್ರಮಾಣಬದ್ಧ ತೂಕ ಮತ್ತು ಅಳತೆ ಅಮಲು ಜಾರಿ ಕಾಯಿದೆ ೧೯೮೫, ಪ್ರಮಾಣ ಬದ್ಧ ತೂಕ ಮತ್ತು ಅಳತೆ ಪೊಟ್ಟಣ ಸಾಮಗ್ರಿ ಕಾಯಿದೆ ೧೯೭೭, ಕರ್ನಾಟಕ ರಾಜ್ಯ ತೂಕ ಮತ್ತು ಅಳತೆ ನಿಯಮ ೧೯೮೮ ಮೊದಲಾದ ನಿಯಮ, ಅಧಿನಿಯಮಗಳನ್ನು ಅನುಸರಿಸುತ್ತದೆ.

ಈ ಕಛೇರಿಯ ಅಧೀನದಲ್ಲಿ ನಿರೀಕ್ಷಕರ ಕಛೇರಿ ಕೊಳ್ಳೇಗಾಲದಲ್ಲಿದ್ದು, ಯಳಂದೂರು, ಕೊಳ್ಳೇಗಾಲ ಹಾಗೂ ಗುಂಡ್ಲುಪೇಟೆ ತಾಲೂಕುಗಳ ಕಾರ್ಯ ವ್ಯಾಪ್ತಿ ಹೊಂದಿರುತ್ತದೆ. ಉಪನಿಯಂತ್ರಕರು, ಕಾನೂನು ಮಾಪನಶಾಸ್ತ್ರ ಇಲಾಖೆ, ಮೈಸೂರು ಅವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಕೃಷಿ ಇಲಾಖೆ

ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಉದ್ದೇಶದಿಂದ ಜಂಟಿ ಕೃಷಿ ನಿರ್ದೇಶಕರ ಕಛೇರಿಯು ೧೯೯೫ರಲ್ಲಿ ಚಾಮರಾಜನಗರದಲ್ಲಿ ಪ್ರಾರಂಭಗೊಂಡಿದ್ದು, ಆಗ ಉಪಕೃಷಿ ನಿರ್ದೇಶಕರ ಕಛೇರಿ ಎಂದು ಪದನಾಮ ಹೊಂದಿತ್ತು. ಅದಕ್ಕೂ ಪೂರ್ವದಲ್ಲಿ ಈ ಕಛೇರಿಯು ಕೃಷಿ ಮೇಲ್ವಿಚಾರಕ (ಇನ್‌ಸ್ಪೆಕ್ಟರ್) ರವರ ನೇತೃತ್ವದಲ್ಲಿ ಮೈಸೂರಿನಲ್ಲಿ ೧೯೧೩ರಲ್ಲಿ ಆರಂಭಗೊಂಡಿತು. ತರುವಾಯ ಇನ್‌ಸ್ಪೆಕ್ಟರ್ ಹುದ್ದೆಯು ಸಹಾಯಕ ಕೃಷಿ ನಿರ್ದೇಶಕರಾಗಿಯೂ ಮತ್ತೆ ಸಹಾಯಕ ಕೃಷಿ ನಿರ್ದೇಶಕರ ಹುದ್ದೆಯನ್ನು ಜನವರಿ ಒಂದು ೧೯೬೭ರಲ್ಲಿ ಉಪ ಕೃಷಿ ನಿರ್ದೇಶಕರಾಗಿಯೂ, ದಿ. ೧-೧೨-೨೦೦೧ ರಿಂದ ಜಂಟಿ ನಿರ್ದೇಶಕರಾಗಿಯೂ ಉನ್ನತೀಕರಿಸಲ್ಪಟ್ಟಿದೆ. ಜಂಟಿ ಕೃಷಿ ನಿರ್ದೇಶಕರು ಈ ಇಲಾಖೆಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿಯ ಆಡಳಿತಾಧಿಕಾರ ಹೊಂದಿರುತ್ತಾರೆ. ಜಂಟಿ ಕೃಷಿ ನಿರ್ದೇಶಕರ ನೆರವಿಗೆ ಒಬ್ಬ ಸಹಾಯಕ ಕೃಷಿ ನಿರ್ದೇಶಕರು (ಕೇಂದ್ರ), ಇಬ್ಬರು ಸಹಾಯಕ ಕೃಷಿ ನಿರ್ದೇಶಕರು (ವಿಷಯ ತಜ್ಞರು), ಒಬ್ಬ ಸಹಾಯಕ ಕೃಷಿ ನಿರ್ದೇಶಕರು (ರೈತ ಮಹಿಳೆ), ಒಬ್ಬ ಆಡಳಿತಾಧಿಕಾರಿ, ಐದು ಮಂದಿ ಕೃಷಿ ಅಧಿಕಾರಿಗಳು, ಇಬ್ಬರು ಅಧೀಕ್ಷಕರು, ಮೂವರು ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿ ವರ್ಗವಿದೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ, ಸಾದಿಲ್ವಾರು ವೆಚ್ಚ ಕೈಪಿಡಿ, ಕರ್ನಾಟಕ ವೆಚ್ಚ ಕೈಪಿಡಿ, ಕರ್ನಾಟಕ ಬಜೆಟ್ ಕೈಪಿಡಿ, ಇಲಾಖಾ ಸುತ್ತೋಲೆಗಳು, ಆದೇಶಗಳು ಮತ್ತು ಮಾರ್ಗಸೂಚಿಗಳು, ಕೀಟನಾಶಕ ಅಧಿನಿಯಮ, ಬೀಜ ನಿಯಂತ್ರಣ ಅಧಿನಿಯಮ, ರಸಗೊಬ್ಬರ ನಿಯಂತ್ರಣ ಅಧಿನಿಯಮ ಮತ್ತಿತರ ನಿಯಮಗಳನ್ನು ತನ್ನ ದೈನಂದಿನ ಕಛೇರಿ ಕೆಲಸ ಕಾರ್ಯಗಳಲ್ಲಿ ಅನುಸರಿಸುತ್ತಿದೆ. ಜಿಲ್ಲೆಯ ರೈತರಿಗೆ ಆಧುನಿಕ ಬೇಸಾಯದ ಬಗ್ಗೆ ತಾಂತ್ರಿಕ ಸಲಹೆ ನೀಡುವುದು, ಕೃಷಿ ಪರಿಕರಗಳಾದ ಬಿತ್ತನೆಯ ಬೀಜ, ರಸಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿಗಳ ಪೂರೈಕೆ ಹಾಗೂ ಅವುಗಳ ಗುಣಮಟ್ಟದ ಬಗ್ಗೆ ಕಾಯ್ದೆಯನುಸಾರ ಕ್ರಮ ತೆಗೆದುಕೊಳ್ಳುವುದು, ರೈತರಿಗೆ ತರಬೇತಿ ನೀಡುವುದು, ಕೃಷಿ ಉತ್ಪಾದನೆ ಹೆಚ್ಚಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು, ನಿಗದಿಪಡಿಸುವ ಯೋಜನೆಗಳ ಅನುಷ್ಠಾನ ಇತ್ಯಾದಿ, ಕಾರ್ಯಚಟುವಟಿಕೆಗಳನ್ನು ಈ

ಇಲಾಖೆಯು ನಿರ್ವಹಿಸುತ್ತದೆ. ೨೦೦೦-೨೦೦೧ರಲ್ಲಿ ಜಿಲ್ಲೆಯ ಎಲ್ಲಾ ಹೋಬಳಿ ಕೇಂದ್ರಗಳಲ್ಲಿ ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಿದ್ದು, ರೈತರಿಗೆ ಅಗತ್ಯ ಪರಿಕರ ವಿತರಣೆ, ಮಣ್ಣು ಪರೀಕ್ಷೆ ಹಾಗೂ ಬೀಜ ಪರೀಕ್ಷೆಯಂತಹ ತಾಂತ್ರಿಕ ಮಾಹಿತಿ ನೀಡಲಾಗುತ್ತಿದೆ.

ವಿವಿಧ ಯೋಜನೆ ಹಾಗೂ ಅಭಿವೃದ್ಧಿ ಚಟುವಟಿಕೆಗಳಡಿ ಹಲವಾರು ಜಿಲ್ಲಾ ಹಾಗೂ ರಾಜ್ಯ ವಲಯ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. ಜಿಲ್ಲಾ ವಲಯ ಕಾರ್ಯಕ್ರಮಗಳಾದ ವೇಗವರ್ಧಕ ಮುಸುಕಿನ ಜೋಳ, ದ್ವಿದಳ ಧಾನ್ಯ ಅಭಿವೃದ್ಧಿ ಯೋಜನೆ, ಎಣ್ಣೆಕಾಳು ಅಭಿವೃದ್ಧಿ ಯೋಜನೆ, ಹನಿ ನೀರಾವರಿ ಯೋಜನೆ, ರೈತಮಿತ್ರ ಯೋಜನೆ, ಕೃಷಿ ಯಂತ್ರೋಪಕರಣ, ಕೃಷಿ ಯಾಂತ್ರೀಕರಣ, ಕುಯಿಲು/ಕಟಾವು ತಂತ್ರಜ್ಞಾನ, ಸಾವಯವ ಗೊಬ್ಬರ, ಬೆಳೆ ಉತ್ಪಾದನೆ, ಸಾವಯವ ಕೃಷಿ ಯೋಜನೆ, ಕೇಂದ್ರ ಪುರಸ್ಕೃತ ಹತ್ತಿ ಅಭಿವೃದ್ಧಿ ಯೋಜನೆ, ಸಸ್ಯ ಸಂರಕ್ಷಣಾ ಯೋಜನೆ, ಕೃಷಿ ಮೇಳ ಹಾಗೂ ವಸ್ತು ಪ್ರದರ್ಶನಗಳು, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ ಮೊದಲಾದವು, ರಾಜ್ಯ ವಲಯದ ಕಾರ್ಯಕ್ರಮಗಳಾದ ಸಸ್ಯ ಸಂರಕ್ಷಣಾ ಯೋಜನೆ, ಕೇಂದ್ರ ಪುರಸ್ಕೃತ ಹತ್ತಿ ಅಭಿವೃದ್ಧಿ ಯೋಜನೆ, ಮಿನಿ ಮಿಷನ್-೨, ಕೃಷಿ ವಾರ್ತಾ ಘಟಕ, ಕೃಷಿ ಜಾತ್ರೆ ಮತ್ತು ವಸ್ತು ಪ್ರದರ್ಶನ, ಐಸೋಪಾಮ್ ದ್ವಿದಳ ಧಾನ್ಯಗಳು, ಐಸೋ ಪಾಮ್ ಎಣ್ಣೆ ಕಾಳುಗಳು, ಕೃಷಿ ಪ್ರಶಸ್ತಿ, ಸಮಿತಿಗಳು ಮತ್ತು ಸಲಹೆಗಳು ಹಾಗೂ ಕೃಷಿ ಯಾಂತ್ರೀಕರಣ ಕಾರ್ಯಕ್ರಮ, ಸಾವಯವ ಗೊಬ್ಬರಗಳ ಯೋಜನೆ ಮತ್ತಿತರ ಕಾರ್ಯಕ್ರಮಗಳೂ ಈ ಇಲಾಖೆಗೆ ಸೇರಿವೆ. ತಾಲೂಕು ಮಟ್ಟದಲ್ಲಿ ಕೃಷಿ ಸಹಾಯಕ ನಿರ್ದೇಶಕರುಗಳು, ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ ಹಾಗೂ ಯಳಂದೂರು ತಾಲೂಕುಗಳಲ್ಲಿದ್ದು, ಆಯಾ ತಾಲೂಕಿನ ಮುಖ್ಯಸ್ಥರಾಗಿ, ತಾಲೂಕು ವ್ಯಾಪ್ತಿ, ಆಡಳಿತಾಧಿಕಾರ ಹೊಂದಿರುತ್ತಾರೆ. ಕೃಷಿ ಆಯುಕ್ತರು, ಬೆಂಗಳೂರು ರವರು ಈ ಕಛೇರಿಯ ತತ್‌ಕ್ಷಣದ ಮೇಲಧಿಕಾರಿಗಳಾಗಿದ್ದಾರೆ.

## ಕಾರ್ಮಿಕ ಇಲಾಖೆ

ಕಾರ್ಮಿಕ ಕಾಯಿದೆಗಳನ್ನು ಅನುಷ್ಠಾನಗೊಳಿಸುವುದು, ಕಾರ್ಮಿಕ ನಷ್ಟ ಪರಿಹಾರ ಕಾಯ್ದೆಯಡಿ ನೊಂದ ಕಾರ್ಮಿಕರಿಗೆ, ಮೃತರ ವಾರಸುದಾರರಿಗೆ ಕಾನೂನು ರೀತ್ಯ ಕಾರ್ಮಿಕ ನಷ್ಟ ಪರಿಹಾರ ಕೊಡಿಸುವುದು, ಸಮಾನ ಕೆಲಸಕ್ಕೆ ಸಮಾನ ವೇತನ, ಬಾಲ ಕಾರ್ಮಿಕ ಕಾಯ್ದೆಯಡಿ ೧೪ ವರ್ಷದ ವಯಸ್ಸಿನ ಕೆಳಗಿನ ದುಡಿಯುವ ಬಾಲಕಾರ್ಮಿಕರನ್ನು ಕೆಲಸದಿಂದ ವಿಮುಕ್ತಿಗೊಳಿಸುವುದು ಮೊದಲಾದ ಧ್ಯೇಯೋದ್ದೇಶಗಳನ್ನು ಹೊಂದಿರುವ ಜಿಲ್ಲಾ ಕಾರ್ಮಿಕ ಅಧಿಕಾರಿ ಕಛೇರಿಯು ದಿನಾಂಕ ೦೯-೦೭-೧೯೯೮ರಲ್ಲಿ ಆರಂಭಗೊಂಡಿತು. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಜಿಲ್ಲಾ ಕಾರ್ಮಿಕ ಅಧಿಕಾರಿ ಅವರ ನೆರವಿಗೆ ಹಿರಿಯ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ನಿರೀಕ್ಷಕರು, ಶೀಘ್ರಲಿಪಿಗಾರರು, ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿ ವರ್ಗವಿದೆ. ಕನಿಷ್ಠ ವೇತನ ಕಾಯ್ದೆ, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, ಸಮಾನ ವೇತನ ಕಾಯ್ದೆ, ಬಾಲ ಕಾರ್ಮಿಕ ಕಾಯ್ದೆ, ಕೈಗಾರಿಕಾ ವಿವಾದ ಕಾಯ್ದೆ, ಬೋನಸ್ ಪಾವತಿ ಕಾಯ್ದೆ, ಗುತ್ತಿಗೆ ಕಾರ್ಮಿಕ ಕಾಯ್ದೆ, ಕಾರ್ಮಿಕರ ನಷ್ಟ ಕಾಯ್ದೆ, ವೇತನ ಪಾವತಿ ಕಾಯ್ದೆ, ಕಟ್ಟಡ ಕಾರ್ಮಿಕರು ಮತ್ತು ಇತರೆ ನಿರ್ಮಾಣ ಕಾಯ್ದೆ ಮತ್ತಿತರ ಕಛೇರಿ ನಿಯಮ ಹಾಗೂ ಅಧಿನಿಯಮಗಳನ್ನು ತನ್ನ ದಿನನಿತ್ಯದ ಕೆಲಸಗಳಲ್ಲಿ ಬಳಸುತ್ತದೆ. ಆಡಳಿತಾನುಕೂಲಕ್ಕಾಗಿ ಕೊಳ್ಳೇಗಾಲ ತಾಲೂಕಿನಲ್ಲಿ ಕಾರ್ಮಿಕ ನಿರೀಕ್ಷಕರ ವ್ಯಾಪ್ತಿಗೊಳಪಡಿಸಿದ್ದು, ಉಳಿದ ತಾಲೂಕುಗಳನ್ನು ತಮ್ಮ ವ್ಯಾಪ್ತಿಯಲ್ಲಿಯೇ ಉಳಿಸಿಕೊಂಡಿದ್ದಾರೆ. ಸಹಾಯಕ ಕಾರ್ಮಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ರವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಜಿಲ್ಲಾ ಉದ್ಯೋಗ ವಿನಿಯಮ ಕಛೇರಿ

ಚಾಮರಾಜನಗರದಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯು ಫೆಬ್ರವರಿ ೨, ೧೯೯೮ರಲ್ಲಿ ಅಸ್ತಿತ್ವಕ್ಕೆ ಬಂದಿತು. ಉದ್ಯೋಗಾಧಿಕಾರಿಯವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರ ನೆರವಿಗೆ ಒಬ್ಬ ಸಹಾಯಕ ಉದ್ಯೋಗಾಧಿಕಾರಿ, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಅಧಿಕಾರಿ ಸಿಬ್ಬಂದಿ ಇದ್ದಾರೆ. ವಿವಿಧ ನಿಯೋಜಕರು ಅಧಿಸೂಚಿಸುವ ಹುದ್ದೆಗಳಿಗೆ ಸೂಕ್ತ ಹಾಗೂ ಅರ್ಹ ಅಭ್ಯರ್ಥಿಗಳ ಪುರಸ್ಕರಣೆ, ವೃತ್ತಿ ಮಾರ್ಗದರ್ಶನ ಕಾರ್ಯಕ್ರಮದ ಅನುಷ್ಠಾನ ಉದ್ಯೋಗ ಮಾರುಕಟ್ಟೆ ಮಾಹಿತಿ ಸಂಗ್ರಹಣೆ ಹಾಗೂ ಬಿತ್ತರಣೆ, ಸ್ಟಡಿ ಸರ್ಕಲ್ ಕಾರ್ಯಕ್ರಮ ಮೊದಲಾದವು ಇದರ ಪ್ರಮುಖ ಕಾರ್ಯ ಚಟುವಟಿಕೆಗಳಾಗಿವೆ.

ರಾಷ್ಟ್ರೀಯ ಉದ್ಯೋಗ ಸೇವಾ ಕೈಪಿಡಿ ಭಾಗ–I ಮತ್ತು ಭಾಗ– II, ಉದ್ಯೋಗ ವಿನಿಮಯ ಕೇಂದ್ರಗಳ ಅಧಿನಿಯಮ ೧೯೫೯ ಮತ್ತು ನಿಯಮಗಳು ೧೯೬೦, ಕರ್ನಾಟಕ ನಾಗರೀಕಾ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ ಮೊದಲಾದವುಗಳನ್ನು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಅನುಸರಿಸಲಾಗುತ್ತಿದೆ. ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು ಅವರು ಈ ಕಚೇರಿಯ ಮೇಲಧಿಕಾರಿಗಳಾಗಿದ್ದಾರೆ.

## ಜಿಲ್ಲಾ ಕೇಂದ್ರ ಗ್ರಂಥಾಲಯ

ಜನ ಸಾಮಾನ್ಯರಲ್ಲಿ ಸಾಹಿತ್ಯಾಭಿರುಚಿಯನ್ನು ಹೆಚ್ಚಿಸುವುದಲ್ಲದೆ, ಸಾಮಾಜಿಕ, ವೈಜ್ಞಾನಿಕ ಹಾಗೂ ನಾಗರೀಕ ಪ್ರಜ್ಞೆಯನ್ನು ಅರಳಿಸುವ ಉದ್ದೇಶದಿಂದ ರಾಜ್ಯದಲ್ಲಿ ಗ್ರಂಥಾಲಯ ಸೇವೆಯನ್ನು ಒದಗಿಸಲು ಕರ್ನಾಟಕ ಸರ್ಕಾರವು ೧೯೬೫ರಲ್ಲಿ ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಕಾಯ್ದೆಯನ್ನು ರೂಪಿಸಿತು. ಅದಕ್ಕನುಗುಣವಾಗಿ ಚಾಮರಾಜನಗರದಲ್ಲಿ ಜಿಲ್ಲಾ ಕೇಂದ್ರ ಗ್ರಂಥಾಲಯವು ೧೯೯೯ರಲ್ಲಿ ಪ್ರಾರಂಭಗೊಂಡಿತು. ಇದು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಸೇರಿದೆ. ಜಿಲ್ಲಾ ವ್ಯಾಪ್ತಿ ಆಡಳಿತ ನಿರ್ವಹಣಾಧಿಕಾರ ಹೊಂದಿದ ಮುಖ್ಯ ಗ್ರಂಥಾಲಯಾಧಿಕಾರಿಯು ಈ ಕಛೇರಿಯ ಮುಖ್ಯಸ್ಥರಾಗಿರುವರು. ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯಿದೆ ೧೯೬೫, ಮುಂತಾದ ನಿಯಮಗಳನ್ನು ಈ ಕಛೇರಿ ತನ್ನ ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಅನ್ವಯಗೊಳಿಸಿಕೊಳ್ಳುತ್ತದೆ. ಓರ್ವ ಗ್ರಂಥಪಾಲಕ, ಮೂವರು ಸಹಾಯಕ ಗ್ರಂಥಪಾಲಕ, ಒಬ್ಬ ದ್ವಿತೀಯ ದರ್ಜೆ ಸಹಾಯಕ, ಮೂವರು ಗ್ರಂಥಾಲಯ ಸಹಾಯಕರು, ಮೂವರು ಗ್ರಂಥಾಲಯ ಸಹವರ್ತಿಗಳು, ಇಬ್ಬರು ಪಟ್ಟಣ ಪಂಚಾಯ್ತಿ ಗ್ರಂಥಾಲಯ ಮೇಲ್ವಿಚಾರಕರು, ೭೩ ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕರು ಮೊದಲಾದ ಒಟ್ಟು ೮೭ ಮಂದಿ ಸಿಬ್ಬಂದಿ ಇವರ ನೆರವಿಗೆ ಇದೆ.

ಜಿಲ್ಲೆಯಲ್ಲಿ ಕೊಳ್ಳೇಗಾಲ, ಯಳಂದೂರು ಹಾಗೂ ಗುಂಡ್ಲುಪೇಟೆಗಳಲ್ಲಿ ತಲಾ ಒಂದೊಂದು ತಾಲೂಕು ಗ್ರಂಥಾಲಯಗಳು, ಹನೂರು ಹಾಗೂ ಯಳಂದೂರುಗಳಲ್ಲಿ ಎರಡು ಪಟ್ಟಣ ಪಂಚಾಯಿತಿ ಗ್ರಂಥಾಲಯಗಳು, ೨೩ ಗ್ರಾಮ ಪಂಚಾಯಿತಿ ಗ್ರಂಥಾಲಯಗಳು ಈ ಕಛೇರಿಯ ಅಧೀನ ಕಛೇರಿಗಳಾಗಿವೆ. ಸದರಿ ಗ್ರಂಥಾಲಯಗಳಲ್ಲಿ ದಿನಪತ್ರಿಕೆಗಳು, ನಿಯತಕಾಲಿಕೆಗಳು, ಪಾಕ್ಷಿಕ ಹಾಗೂ ಮಾಸಿಕ ನಿಯತಕಾಲಿಕೆಗಳು ಮತ್ತು ಸ್ಪರ್ಧಾತ್ಮಕ ನಿಯತಕಾಲಿಕೆಗಳನ್ನು ಸಾರ್ವಜನಿಕರಿಗೆ ಒದಗಿಸುವುದಲ್ಲದೆ, ಗ್ರಂಥಾಲಯಗಳ ಬಗ್ಗೆ ಸಾರ್ವಜನಿಕರಲ್ಲಿ ಆಸಕ್ತಿ ಮೂಡಿಸಲು ಸಭೆ, ಸಮಾರಂಭ, ವಿಚಾರ ಸಂಕಿರಣ ಹಾಗೂ ಸ್ಪರ್ಧೆಗಳನ್ನು ಆಗಾಗ ಏರ್ಪಡಿಸಲಾಗುತ್ತದೆ. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇವರು ಮೇಲಧಿಕಾರಿಗಳಾಗಿರುತ್ತಾರೆ.

## ಜಿಲ್ಲಾ ಕೈಗಾರಿಕಾ ಕೇಂದ್ರ

ಉದ್ಯಮಶೀಲರು ಮತ್ತು ಉದ್ಯಮಗಳಿಗೆ ಸರ್ಕಾರದ ಕೈಗಾರಿಕಾ ನೀತಿಯಂತೆ ದೊರಕುವ ಸವಲತ್ತುಗಳ ಬಗ್ಗೆ ತಿಳಿಸಿದ್ದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸುವ ಉದ್ದೇಶದಿಂದ ಜಿಲ್ಲಾ ಕೈಗಾರಿಕಾ ಕೇಂದ್ರವನ್ನು ಚಾಮರಾಜನಗರದಲ್ಲಿ ಸ್ಥಾಪಿಸಲಾಯಿತು. ಜಂಟಿ ನಿರ್ದೇಶಕರು ಈ ಇಲಾಖೆಯ ಮುಖ್ಯಸ್ಥರಾಗಿದ್ದು, ಚಾಮರಾಜನಗರ ಜಿಲ್ಲಾ ವ್ಯಾಪ್ತಿ ಅಧಿಕಾರವನ್ನು ಹೊಂದಿರುತ್ತಾರೆ. ಅವರಿಗೆ ಸಹಾಯಕ ನಿರ್ದೇಶಕರು, ಕೈಗಾರಿಕಾ ಉತ್ತೇಜನಾಧಿಕಾರಿ, ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ಶೀಘ್ರಲಿಪಿಗಾರರು, ಬೆರಳಚ್ಚುಗಾರರು, ಮತ್ತಿತರ ಅಧಿಕಾರಿ ಸಿಬ್ಬಂದಿ ಆಡಳಿತದಲ್ಲಿ ನೆರವಾಗಿದ್ದಾರೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು ಮತ್ತಿತರ ನಿಯಮ ಅಧಿನಿಯಮಗಳನ್ನು ಕಛೇರಿಯ ಕಾಯನಿರ್ವಹಣೆಯಲ್ಲಿ ಪಾಲಿಸಲಾಗುತ್ತಿದೆ.

ವಿಶೇಷ ಘಟಕ ಯೋಜನೆ, ಗಿರಿಜನ ಘಟಕ ಯೋಜನೆ, ಪ್ರಧಾನಮಂತ್ರಿಗಳ ಉದ್ಯೋಗ ಸೃಷ್ಟಿ ಯೋಜನೆ, ತಾತ್ಕಾಲಿಕ ನೋಂದಣಿ ಪತ್ರ ನೀಡುವುದು, ಭೂ ಪರಿವರ್ತನಾ ಶುಲ್ಕ ವಿನಾಯಿತಿ ಪತ್ರ, ಪ್ರವೇಶ ತೆರಿಗೆ ಮತ್ತು ವಿಶೇಷ ತೆರಿಗೆ ವಿನಾಯ್ತಿ, ಕೃಷಿ ಉತ್ಪನ್ನ ಕೈಗಾರಿಕೆಗಳಿಗೆ ಎ.ಪಿ.ಎಂ.ಸಿ. (APMC) ಸೆಸ್‌ನಿಂದ ವಿನಾಯ್ತಿ, ಸ್ಟಾಂಪ್ ಡ್ಯೂಟಿ ವಿನಾಯ್ತಿ ಪತ್ರ, ಸುವರ್ಣ ಕಾರ್ಯ ಉದ್ಯೋಗ ಶಿಕ್ಷಣ ಯೋಜನೆ, ಕೆ.ವಿ.ಐ.ಸಿ (KVIC) ಮಾರ್ಜಿನಲ್ ಮನಿ ಯೋಜನೆ, ಉದ್ಯಮಶೀಲ ಅಭಿವೃದ್ಧಿ ಕಾರ್ಯಕ್ರಮ, ರೋಗಗ್ರಸ್ಥ ಕೈಗಾರಿಕೆಗಳ ಪುನಃಶ್ಚೇತನ, ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ, ಖಾದಿ ಮತ್ತು ಗ್ರಾಮೋದ್ಯೋಗ ವಿಭಾಗದ ಕಾಯಕ್ರಮಗಳು, ಇತರೆ ಸಂಘ ಸಂಸ್ಥೆಗಳಿಂದ ಕೈಗಾರಿಕೆ ಸ್ಥಾಪನೆಗೆ ನೆರವು ಸಿಡಾಕ್/ಟೆಕ್ಸಾಕ್/ಸಣ್ಣ ಕೈಗಾರಿಕಾ ಸೇವಾ ಸಂಸ್ಥೆ/ಗ್ರಾಮೀಣ ಸ್ವ–ಉದ್ಯೋಗ ತರಬೇತಿ ಸಂಸ್ಥೆ, ಕೆ.ಎಸ್.ಎಸ್.ಐ.ಡಿ.ಸಿ./ಕೆ.ಐ.ಎ.ಡಿ.ಬಿ, ಉದ್ಯೋಗ ಮಿತ್ರ, ಕಿಯೋನಿಕ್ಸ್, ತೆಂಗಿನನಾರಿನ ನಿಗಮ ಹಾಗೂ ವಿ.ಐ.ಟಿ.ಸಿ. ಮೊದಲಾದ ಇತರೆ ಸಂಘ ಸಂಸ್ಥೆಗಳಿಂದ ಕೈಗಾರಿಕೆ ಸ್ಥಾಪನೆಗೆ ನೆರವು ಮೊದಲಾದ ವಿವಿಧ ಯೋಜನೆಗಳು ಹಾಗೂ ಅಭಿವೃದ್ಧಿ ಚಟುವಟಿಕೆಗಳಲ್ಲಿ ಈ ಇಲಾಖೆಯು ಕಾರ್ಯನಿರತವಾಗಿದೆ.

ಈ ಕಛೇರಿಯ ವ್ಯಾಪ್ತಿಯಲ್ಲಿ ಬರುವ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಕೆ.ವಿ.ಐ. ರವರು ಚಾಮರಾಜನಗರದಲ್ಲಿದ್ದು, ಇಡೀ ಜಿಲ್ಲೆಯ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಕೊಳ್ಳೇಗಾಲ, ಗುಂಡ್ಲುಪೇಟೆ, ಚಾಮರಾಜನಗರ ಹಾಗೂ ಯಳಂದೂರು ತಾಲೂಕುಗಳಲ್ಲಿ ಕೈಗಾರಿಕಾ ವಿಸ್ತೀರ್ಣಾಧಿಕಾರಿಗಳಿದ್ದು, ಆಯಾ ತಾಲೂಕಿನ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ಖನಿಜಭವನ, ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಯಾಗಿರುತ್ತಾರೆ.

## ಜಿಲ್ಲಾ ಖಜಾನೆ

ಚಾಮರಾಜನಗರ ಜಿಲ್ಲಾ ಖಜಾನೆಯು ಹಿಂದಿನ ಮೈಸೂರು ರಾಜ್ಯ ರಚನೆಯಾದಾಗಿನಿಂದ ಉಪಖಜಾನೆಯ ಸ್ಥಾನಮಾನ ಹೊಂದಿದ್ದು, ಜಿಲ್ಲಾ ಪುನರ್‌ವಿಂಗಡಣೆಯಾದ ನಂತರ ದಿ. ೦೧–೦೪–೧೯೯೮ರಿಂದ ಜಿಲ್ಲಾ ಖಜಾನೆಯಾಗಿ ಅಸ್ತಿತ್ವಕ್ಕೆ ಬಂದಿರುತ್ತದೆ. ಈ ಕಚೇರಿಯು ಆರ್ಥಿಕ ಇಲಾಖೆಗೆ (ಖಜಾನೆ ಇಲಾಖೆ) ಸೇರಿರುತ್ತದೆ. ಜಿಲ್ಲಾ ಖಜಾನಾಧಿಕಾರಿಯು ಈ ಕಚೇರಿಯ ಮುಖ್ಯಸ್ಥರಾಗಿರುತ್ತಾರೆ. ಇವರ ನೆರವಿಗೆ ಒಬ್ಬ ಸಹಾಯಕ ಖಜಾನಾಧಿಕಾರಿ, ನಾಲ್ಕು ಮಂದಿ ಮುಖ್ಯ ಲೆಕ್ಕಿಗರು, ೧೦ ಮಂದಿ ಪ್ರಥಮ ದರ್ಜೆ ಸಹಾಯಕರು, ೧೧ ಮಂದಿ ದ್ವಿತೀಯ ದರ್ಜೆ ಸಹಾಯಕರು ಮೊದಲಾದ ಮತ್ತಿತರ ಸಿಬ್ಬಂದಿ ವರ್ಗವಿದೆ.

ವಿವಿಧ ಕಚೇರಿ ಹಾಗೂ ಸಾರ್ವಜನಿಕರಿಂದ ವಿವಿಧ ಲೆಕ್ಕಶೀರ್ಷಿಕೆಗಳಿಗೆ ಬ್ಯಾಂಕು ಮೂಲಕ ಜಮೆ ಆಗುವ ರಾಜಸ್ವ ಇತರೆ ಲೆಕ್ಕಗಳನ್ನು ಕ್ರೋಢೀಕರಿಸಿ ವಿವಿಧ ಲೆಕ್ಕಶೀರ್ಷಿಕೆಗಳ ರಾಜಸ್ವ ವರದಿಯನ್ನು ಜಿಲ್ಲೆಯ ಎಲ್ಲಾ ಉಪಖಜಾನೆಗಳಿಂದ ಸ್ವೀಕೃತವಾದ ವರದಿಯೊಡನೆ ಕ್ರೋಢೀಕರಿಸಿ ಪ್ರತಿ ತಿಂಗಳು ಮಹಾಲೇಖಪಾಲರು, ಬೆಂಗಳೂರು ಇವರಿಗೆ ಸಲ್ಲಿಸುವುದು ಹಾಗೂ ವಿವಿಧ ಲೆಕ್ಕಶೀರ್ಷಿಕೆಗಳಲ್ಲಿ ಖಜಾನೆಯ ಮುಖಾಂತರ ಪಾವತಿಯಾಗುವ ವಿವರಗಳನ್ನು ಲೆಕ್ಕಶೀರ್ಷಿಕೆವಾರು ಜಿಲ್ಲೆಯ ಎಲ್ಲಾ ಉಪಖಜಾನೆಗಳಿಂದ ಸ್ವೀಕೃತವಾದ ವರದಿಗಳ ಸಹಿತ ಕ್ರೋಡೀಕರಿಸಿ ಮಹಾಲೇಖಪಾಲರಿಗೆ ಸಲ್ಲಿಸುವುದು, ಹಾಗೆಯೇ ಜಿಲ್ಲಾ ಪಂಚಾಯತ್ ನಿಧಿಗೆ ಸಂಬಂಧಿಸಿದಂತೆ ಮೇಲ್ಕಂಡ ವರದಿಯನ್ನು ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಾಮರಾಜನಗರ ಹಾಗೂ ತಾಲೂಕು ಪಂಚಾಯಿತಿ ನಿಧಿಗೆ ಸಂಬಂಧಿಸಿದಂತೆ ವರದಿಯನ್ನು ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕು ಪಂಚಾಯ್ತಿ ಚಾಮರಾಜನಗರ ಇಲ್ಲಿಗೆ ಸಲ್ಲಿಸುವುದು. ಹಾಗೂ ವಿವಿಧ ಇಲಾಖೆಗಳಿಂದ ಸ್ವೀಕೃತಗೊಂಡ ಬಿಲ್ಲುಗಳನ್ನು/ಚೆಕ್ಕುಗಳನ್ನು ಪರಿಶೀಲಿಸಿ ಧನಾದೇಶಗಳನ್ನು ವಿತರಿಸುವುದು; ತಾಲೂಕು ಕಚೇರಿ ಚಾಮರಾಜನಗರ ಮತ್ತು ಅದರ ವ್ಯಾಪ್ತಿಯಲ್ಲಿನ ನಾಡ ಕಚೇರಿಗಳಿಂದ ಸ್ವೀಕೃತಗೊಳ್ಳುವ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಾದ ವೃದ್ಧಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ ಹಾಗೂ ಸಂಧ್ಯಾ ಸುರಕ್ಷಾ ಯೋಜನೆ ಮುಂತಾದ ಮಾಸಾಶನಗಳ ಮಂಜೂರಾತಿ ಆದೇಶಗಳನ್ನು ಪರಿಶೀಲಿಸಿ, ಖಜಾನೆ ಗಣಕ ಯಂತ್ರದಲ್ಲಿ ಅಳವಡಿಸಿ, ಪ್ರತಿ ತಿಂಗಳು ಸಂಬಂಧಪಟ್ಟ ಫಲಾನುಭವಿಗಳಿಗೆ ಅಂಚೆಕಚೇರಿ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ಮುಖಾಂತರ ಮಾಸಾಶನಗಳನ್ನು ವಿತರಿಸಲಾಗುತ್ತದೆ. ಮಹಾಲೇಖಪಾಲರು ಹಾಗೂ ಸಹಾಯಕ ನಿಯಂತ್ರಕರು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಚಾಮರಾಜನಗರ ಇವರಿಂದ ಸ್ವೀಕೃತಗೊಳ್ಳುವ ವಿವಿಧ ಪಿಂಚಣಿ ಬಟವಾಡೆ ಆದೇಶಗಳನ್ನು ಖಜಾನೆ ಗಣಕಯಂತ್ರದಲ್ಲಿ ಅಳವಡಿಸಿ, ಸಂಬಂಧಿಸಿದ ನಿವೃತ್ತ ನೌಕರರಿಗೆ ಪಿಂಚಣಿ ಹಾಗೂ ಇತರೆ ಆರ್ಥಿಕ ಸೌಲಭ್ಯಗಳನ್ನು ಪಾವತಿಸುವುದು ಹಾಗೂ ಉಪಖಜಾನೆಗಳಿಗೆ ಸಂಬಂಧಪಟ್ಟ ಪಿಂಚಣಿ ಬಟವಾಡೆ ಆದೇಶ (ಪಿಪಿಓ) ಮೊದಲಾದ ಧ್ಯೇಯೋದ್ದೇಶ ಹಾಗೂ ಕಾರ್ಯಚಟುವಟಿಕೆಗಳಲ್ಲಿ ತೊಡಗಿದೆ. ಮೇಲಿನ ಕಾರ್ಯ ಚಟುವಟಿಕೆಗಳನ್ನು ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ, ಕರ್ನಾಟಕ ಸಾದಿಲ್ವಾರು ವೆಚ್ಚ ಕೈಪಿಡಿ, ಆಯವ್ಯಯ ಕೈಪಿಡಿ, ಕೆ.ಸಿ.ಎಸ್.ಆರ್. ಮತ್ತಿತರ ನಿಯಮ ಅಧಿನಿಯಮಗಳನ್ವಯ ಅನುಸರಿಸುತ್ತದೆ.

ಉಪಖಜಾನೆ, ಗುಂಡ್ಲುಪೇಟೆ, ಕೊಳ್ಳೇಗಾಲ ಹಾಗೂ ಯಳಂದೂರು ತಾಲೂಕುಗಳಲ್ಲಿದ್ದು, ಈ ಕಚೇರಿಯ ಅಧೀನದಲ್ಲಿ ಬರುತ್ತವೆ. ಪತ್ರಾಂಕಿತ ಖಜಾನಾಧಿಕಾರಿಗಳು ಆಯಾ ತಾಲೂಕಿನ ಉಪಖಜಾನೆಯ ಆಡಳಿತ ವ್ಯಾಪ್ತಿ ಹೊಂದಿರುತ್ತಾರೆ. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ವಿಶ್ವೇಶ್ವರ ಗೋಪುರ ಬೆಂಗಳೂರು ಇವರು ಈ ಕಚೇರಿಯ ಮೇಲಧಿಕಾರಿಯಾಗಿರುತ್ತಾರೆ.

## ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆ

ಜನತೆಯ ಸಹಭಾಗಿತ್ವದೊಂದಿಗೆ ಜಿಲ್ಲೆಯಲ್ಲಿನ ಒಣಭೂಮಿಯಲ್ಲಿ ವಿವಿಧ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ಮಳೆ ನೀರನ್ನು ಸಂರಕ್ಷಿಸುವುದು, ಭೂ ಮೇಲ್ಮಣ್ಣು-ಸವಕಳಿಯಾಗುವುದನ್ನು ಹಾಗೂ ಕೆರೆ, ಕುಂಟೆಗಳಲ್ಲಿ ಹೂಳು ತುಂಬುವುದನ್ನು ತಡೆದು ಅಂತರ್ಜಲ ಹೆಚ್ಚಿಸುವುದು, ಆ ಮೂಲಕ ಜಿಲ್ಲೆಯಲ್ಲಿ ಅರಣ್ಯ ಪ್ರದೇಶವನ್ನು ಸಂರಕ್ಷಿಸುವುದು ಹಾಗೂ ವಿಸ್ತರಿಸುವುದಲ್ಲದೆ ರೈತರ ತಲಾ ಆದಾಯವು ಹೆಚ್ಚುವಂತೆ ಮಾಡುವುದು ಮತ್ತಿತರ ಉದ್ದೇಶಗಳಿಂದ ಚಾಮರಾಜನಗರದಲ್ಲಿ ಏಪ್ರಿಲ್ ೨೦೦೦ ದಿಂದ

ಜಲಾನಯನ ಅಭಿವೃದ್ಧಿ ಇಲಾಖೆಯನ್ನು ಆರಂಭಿಸಲಾಯಿತು. ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಯು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ.

## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)

ಜಿಲ್ಲೆಯಲ್ಲಿ ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸ್ಸಿನಂತೆ ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಹಾಗೂ ಶಿಕ್ಷಕರ ವೃತ್ತಿ ನೈಪುಣ್ಯತೆಯನ್ನು ಹೆಚ್ಚಿಸಲು ಮತ್ತು ಉತ್ತಮಪಡಿಸಲು ಈ ಸಂಸ್ಥೆಯನ್ನು ಜೂನ್ ೨೪, ೨೦೦೫ರಲ್ಲಿ ಸ್ಥಾಪಿಸಲಾಯಿತು. ಪ್ರಾಂಶುಪಾಲರು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಈ ಸಂಸ್ಥೆಯು ಸಾರ್ವಜನಿಕ ಶಿಕ್ಷಣ ಇಲಾಖೆಗೆ (ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ–D.S.R.T.C) ಸೇರಿರುತ್ತದೆ. ಒಬ್ಬ ಉಪ ಪ್ರಾಂಶುಪಾಲರು, ಐದು ಮಂದಿ ಹಿರಿಯ ಉಪನ್ಯಾಸಕರು, ಒಂಭತ್ತು ಉಪನ್ಯಾಸಕರು, ಇಬ್ಬರು ಅಧೀಕ್ಷಕರು, ಒಬ್ಬ ಅಂಕಿಅಂಶ ತಜ್ಞ, ಇಬ್ಬರು ತಾಂತ್ರಿಕ ಸಹಾಯಕರು ಮತ್ತಿತರ ಅಧಿಕಾರಿ ಸಿಬ್ಬಂದಿ ವರ್ಗ ಇವರ ನೆರವಿಗಿದ್ದಾರೆ.

ಸೇವಾ ನಿರತ ಶಿಕ್ಷಕರಿಗೆ ತರಬೇತಿ, ಆರ್. ಇ. ಎಂ. ಎನ್. ಅಡಿಯಲ್ಲಿ ಬರುವ ಯೋಜನೆಗಳು, ಕ್ಯೂ. ಎಂ.ಟಿ. ಪರಿಹಾರ ಬೋಧನೆ, ನ್ಯೂಸ್ ಲೆಟರ್, ವಿಷಯದ ಗುಣಮಟ್ಟ ಹೆಚ್ಚಿಸಲು ಗುಣ ಸಂಪದ, ಸಾಮರ್ಥ್ಯ ಚಟುವಟಿಕೆಗಳ ಖಜಾನೆ ತಯಾರಿಕೆ, ಶಾಲೆಗಳು ಐ.ಸಿ.ಟಿ–೧ ಹಾಗೂ ಐ.ಸಿ.ಟಿ–೨ ಯೋಜನೆಯಡಿಯಲ್ಲಿ ಕಂಪ್ಯೂಟರ್ ಅಳವಡಿಕೆ, ಎಜುಸ್ಯಾಟ್ ಕಾರ್ಯಕ್ರಮ, ರೇಡಿಯೋ ಕಾರ್ಯಕ್ರಮ, ಚಿಣ್ಣರ ಅಂಗಳ ಮೊದಲಾದ ಯೋಜನೆಗಳು ಹಾಗೂ ಅಭಿವೃದ್ಧಿ ಚಟುವಟಿಕೆಗಳಲ್ಲಿ ಈ ಕಛೇರಿ ನಿರತವಾಗಿದೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ಹಣಕಾಸು ಸಂಹಿತೆ ಮೊದಲಾದ ನಿಯಮಗಳನ್ನು ತನ್ನ ಕಛೇರಿಯ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತಿದೆ. ಈ ಕಛೇರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಛೇರಿಗಳು ಹಾಗೂ ಕಾರ್ಯವ್ಯಾಪ್ತಿ ಹೀಗಿವೆ. ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ, ಯಳಂದೂರು ಹಾಗೂ ಹನೂರುಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿ.ಇ.ಓ–೧) ಈ ಕಛೇರಿಗಳ ಮುಖ್ಯಸ್ಥರಾಗಿದ್ದು, ಆಯಾ ತಾಲೂಕಿನ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಅಲ್ಲದೆ ಈ ಸ್ಥಳಗಳಲ್ಲಿ ಬಿ.ಆರ್.ಸಿ. ಹಾಗೂ ಬಿ.ಆರ್.ಪಿಗಳಿದ್ದಾರೆ. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಇ.ಸಿ. ಹಾಗೂ ಸಿ.ಆರ್.ಪಿ. ಗಳಿದ್ದಾರೆ. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (D.S.E.R.T.) ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ

ಈ ಕಛೇರಿಯು ಅವಿಭಜಿತ ಮೈಸೂರು ಜಿಲ್ಲೆಯಲ್ಲಿ ೧೯೫೬ರಲ್ಲಿ ವಿಭಾಗೀಯ ಅಂಕಿಅಂಶಗಳ ಕಛೇರಿ ಎಂದು ಆರಂಭಗೊಂಡಿತು. ನಂತರ ೧೯೬೦ರ ಜನವರಿಯಲ್ಲಿ ಈ ಕಛೇರಿಯ ಹೆಸರು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಎಂದು ಪುನರ್ ನಾಮಕರಣಗೊಂಡಿತು. ಚಾಮರಾಜನಗರ ಜಿಲ್ಲೆಯಲ್ಲಿ ಈ ಕಛೇರಿ ೧೯೯೯ರ ಜುಲೈನಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಚಾಮರಾಜನಗರ, ಕೊಳ್ಳೇಗಾಲ, ಯಳಂದೂರು ಹಾಗೂ ಗುಂಡ್ಲುಪೇಟೆ ತಾಲೂಕುಗಳು ಈ ಕಛೇರಿಯ ಆಡಳಿತ ವ್ಯಾಪ್ತಿಗೆ ಒಳಪಟ್ಟಿವೆ. ಜಿಲ್ಲೆಯ ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಸಂಬಂಧಿಸಿದ ಕಛೇರಿಗಳಿಂದ ಅಂಕಿಅಂಶಗಳ ಮಾಹಿತಿ ಸಂಗ್ರಹಣೆ ಹಾಗೂ ಪ್ರಕಟಣೆ ಮಾಡುವುದು ಈ ಕಛೇರಿಯ ಧ್ಯೇಯೋದ್ದೇಶವಾಗಿದೆ. ಅಲ್ಲದೆ ರಾಜ್ಯ ಹಾಗೂ ಕೇಂದ್ರ ಸರ್ಕಾರದವರು

ಕಾಲಕಾಲಕ್ಕೆ ವಹಿಸುವ ಕೃಷಿ, ಆರ್ಥಿಕ, ಸಾಮಾಜಿಕ, ಔದ್ಯೋಗಿಕ, ಶೈಕ್ಷಣಿಕ ಗಣತಿಗಳಿಂದ ಮಾಹಿತಿ ಸಂಗ್ರಹಿಸುವುದು. ರಾಷ್ಟ್ರೀಯ ಮಾದರಿ ಸಮೀಕ್ಷೆ, ಬೆಳೆ ಅಂದಾಜು ಸಮೀಕ್ಷೆ ಇತ್ಯಾದಿಗಳ ಮೂಲಕ ಮಾಹಿತಿ ಸಂಗ್ರಹಿಸುವ ಮತ್ತಿತರ ಕಾರ್ಯಗಳನ್ನು ಈ ಕಛೇರಿಯು ನಿರ್ವಹಿಸುತ್ತದೆ. ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿದ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಇವರ ನೆರವಿಗೆ ಮೂವರು ಸಹಾಯಕ ಸಾಂಖ್ಯಿಕ ಅಧಿಕಾರಿಗಳು, ಮೂರು ಸಾಂಖ್ಯಿಕ ನಿರೀಕ್ಷಕರು, ಗಣತಿದಾರರು, ಪ್ರಥಮ ಹಾಗೂ ದ್ವಿತೀಯ ದರ್ಜೆ ಸಹಾಯಕರುಗಳು ಮತ್ತಿತರ ಸಿಬ್ಬಂದಿಗಳು ಇರುತ್ತಾರೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಮಾಹಿತಿ ಹಕ್ಕು ನಿಯಮ ಮತ್ತಿತರ ನಿಯಮ; ಅಧಿನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತದೆ. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ಅವರು ಮೇಲಧಿಕಾರಿಗಳಾಗಿರುತ್ತಾರೆ.

## ತೋಟಗಾರಿಕೆ ಇಲಾಖೆ

ಉತ್ತಮ ಬೀಜಗಳ ಸರಬರಾಜು, ವಿವಿಧ ಅಲಂಕಾರಿಕ ಗಿಡಗಳು, ಹಣ್ಣು, ತರಕಾರಿ ಮತ್ತಿತರ ತೋಟಗಾರಿಕಾ ಬೆಳೆಗಳನ್ನು ಬೆಳೆಸುವ ಬಗ್ಗೆ ಆಸಕ್ತ ಸಾರ್ವಜನಿಕರಿಗೆ ಮಾರ್ಗದರ್ಶನ ಹಾಗೂ ತಾಂತ್ರಿಕ ನೆರವು ನೀಡುವುದು, ಜಿಲ್ಲೆಯಲ್ಲಿನ ತೋಟಗಾರಿಕೆ ಕ್ಷೇತ್ರ ಹಾಗೂ ಸಸ್ಯ ಕ್ಷೇತ್ರಗಳಲ್ಲಿ ಉತ್ತಮ ಗುಣಮಟ್ಟದ ವಿವಿಧ ಜಾತಿಯ ಹಣ್ಣಿನ ಗಿಡಗಳ ಸಸಿಗಳನ್ನು ಉತ್ಪಾದಿಸಿ ರೈತರಿಗೆ ಮಾರಾಟ ಮಾಡುವುದು ಇಲಾಖೆಯ ಕಾರ್ಯಕ್ರಮಗಳನ್ನು ಜಾರಿಗೆ ತರುವುದು ಮೊದಲಾದ ಮುಖ್ಯ ಧ್ಯೇಯೋದ್ದೇಶಗಳೊಂದಿಗೆ ಚಾಮರಾಜನಗರದಲ್ಲಿ ೨೦೦೦ನೇ ಇಸವಿಯಲ್ಲಿ ತೋಟಗಾರಿಕೆ ಇಲಾಖೆ ಪ್ರಾರಂಭಗೊಂಡಿತು. ಇದಕ್ಕೂ ಮೊದಲು ೧೯೫೬ ರಿಂದ ೧೯೭೧ರ ವರೆಗೆ ಇದು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪಾರ್ಕ್ಸ್ ಅಂಡ್ ಗಾರ್ಡನ್ಸ್, ಮಂಡ್ಯ ಇವರ ಆಡಳಿತಕ್ಕೆ ಒಳಪಟ್ಟಿದ್ದಿತು. ಮುಂದೆ ೧೯೭೧ ರಿಂದ ೧೯೯೨ರ ವರೆಗೆ ಇದು ಜಿಲ್ಲಾ ತೋಟಗಾರಿಕೆ ಅಧಿಕಾರಿಯ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದಿತು. ಉಪನಿರ್ದೇಶಕರು ಪ್ರಸ್ತುತ ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ಆಡಳಿತಾಧಿಕಾರ ಹೊಂದಿರುತ್ತಾರೆ. ಅವರ ನೆರವಿಗೆ ಇಬ್ಬರು ಸಹಾಯಕ ತೋಟಗಾರಿಕೆ ನಿರ್ದೇಶಕರು, ಇಬ್ಬರು ಸಹಾಯಕ ತೋಟಗಾರಿಕೆ ನಿರ್ದೇಶಕರು, ಇಬ್ಬರು ಸಹಾಯಕ ತೋಟಗಾರಿಕೆ ಅಧಿಕಾರಿಗಳು, ಒಬ್ಬ ಅಧೀಕ್ಷಕರು, ಒಬ್ಬ ಪ್ರಥಮ ದರ್ಜೆ ಸಹಾಯಕ, ಒಬ್ಬ ದ್ವಿತೀಯ ದರ್ಜೆ ಸಹಾಯಕ ಮತ್ತಿತರ ಸಿಬ್ಬಂದಿ ಇದ್ದಾರೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ ಹಾಗೂ ಇನ್ನಿತರೆ ನಿಗದಿತ ನಿಯಮ ಅಧಿನಿಯಮಗಳನ್ನು ಕಛೇರಿ ಕೆಲಸದಲ್ಲಿ ಪಾಲಿಸಲಾಗುತ್ತಿದೆ. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಚಾಮರಾಜನಗರ ತಾಲೂಕು; ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಗುಂಡ್ಲುಪೇಟೆ ತಾಲೂಕು; ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಕೊಳ್ಳೇಗಾಲ ತಾಲೂಕು; ಸಹಾಯಕ ತೋಟಗಾರಿಕೆ ನಿರ್ದೇಶಕರು ಯಳಂದೂರು ತಾಲೂಕು ಈ ಕಛೇರಿಯ ಅಧೀನದಲ್ಲಿ ಬರುತ್ತವೆ. ಈ ಕಛೇರಿಯ ಮುಖ್ಯಸ್ಥರು ಆಯಾ ತಾಲೂಕಿನ ಉಸ್ತುವಾರಿ ಅಧಿಕಾರಿಗಳಾಗಿ ತಾಲೂಕು ಮಟ್ಟದಲ್ಲಿ ವಿವಿಧ ಯೋಜನೆಗಳ ಅನುಷ್ಠಾನಾಧಿಕಾರಿಗಳಾಗಿರುತ್ತಾರೆ.

ಜಿಲ್ಲೆಯಲ್ಲಿ ತೋಟಗಾರಿಕೆ ಬಗ್ಗೆ ತಾಂತ್ರಿಕ ಮಾಹಿತಿ ನೀಡುವುದು, ರೈತರಿಗೆ ತರಬೇತಿ ನೀಡುವುದು, ಹಣ್ಣು ಮತ್ತು ತರಕಾರಿ ಬೆಳೆ ಪ್ರದೇಶ, ಸಸ್ಯ ಅಭಿವೃದ್ಧಿ ಮತ್ತು ಅವುಗಳ ನಿರ್ವಹಣೆ, ಪ್ಲಾಂಟೇಶನ್ ಬೆಳೆಗಳ ಬಗ್ಗೆ ಮಾಹಿತಿ ಒದಗಿಸುವುದೇ ಮೊದಲಾದ ತೋಟಗಾರಿಕಾ ಅಭಿವೃದ್ಧಿ ಚಟುವಟಿಕೆಗಳನ್ನು ಈ ಕಛೇರಿಯು ನಿರ್ವಹಿಸುತ್ತಿದೆ. ತೆಂಗು ಗೋಟು (ಬೀಜ) ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ ಯೋಜನೆ, ತೆಂಗು ಅಭಿವೃದ್ಧಿ ಮಂಡಳಿ ಸಹಾಯದಲ್ಲಿ ತೆಂಗು ಉತ್ಪಾದಕತೆ/ಅಭಿವೃದ್ಧಿಯ ಸಮಗ್ರ ಬೇಸಾಯ ಯೋಜನೆ; ಹಣ್ಣು

ಮತ್ತು ತರಕಾರಿಗಳ ಅಭಿವೃದ್ಧಿ ವಿಚಾರಗೋಷ್ಠಿ, ಕ್ಷೇತ್ರೋತ್ಸವ ಮತ್ತು ಫಲ–ಪುಷ್ಪ ಪ್ರದರ್ಶನಗಳ ಸಂಯೋಜನೆ; ವಿವಿಧ ಸ್ಪರ್ಧೆಗಳನ್ನು ನಡೆಸುವುದು, ಪ್ರಚಾರ ಸಾಹಿತ್ಯ ಪ್ರಕಟಣೆ, ಕೃಷಿ ಕ್ಷೇತ್ರ ಮತ್ತು ನರ್ಸರಿಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿ, ತೋಟಗಾರಿಕೆ ಬೆಳೆಗಳ ಪ್ರಚಾರ, ವಿಶೇಷ ಘಟಕ ಯೋಜನೆ (ರಾಜ್ಯ) ಗಿರಿಜನ ಉಪಯೋಜನೆ (ರಾಜ್ಯ), ಸಸ್ಯ ಸಂರಕ್ಷಣಾ ಪ್ರಯೋಗಾಲಯಗಳ ನಿರ್ಮಾಣ, ತೆಂಗು ಮತ್ತು ಅಡಕೆ ಬೆಳೆಗಳ ಅಣಬೆ ರೋಗ ನಿಯಂತ್ರಣ ಹಾಗೂ ಹಣ್ಣು ತರಕಾರಿ ಸಂರಕ್ಷಣೆ ಮುಂತಾದ ಜಿಲ್ಲಾ ಪಂಚಾಯತ್ ಕಾರ್ಯ ಯೋಜನೆಗಳನ್ನು ಈ ಕಛೇರಿ ಅನುಷ್ಠಾನಗೊಳಿಸುತ್ತದೆ. ಗ್ರಾ.ಮೂ.ಅ. ನಿಧಿ–೧೧–೧೪ ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ತೋಟಗಾರಿಕೆ ಬೆಳೆಗಳಿಗಾಗಿ ಹನಿ ನೀರಾವರಿ (ಎಸ್–೦೫), ಯೋಜನೆಯನ್ನು ಜಿಲ್ಲೆಯಲ್ಲಿ ಜಾರಿಗೊಳಿಸುವುದು ರೈತರ ತೋಟಗಳಲ್ಲಿ ಇಸ್ರೇಲಿ ತಂತ್ರಜ್ಞಾನ ಅಳವಡಿಕೆಗಾಗಿ ಪ್ರಾಯೋಗಿಕ ಯೋಜನೆ (ಎಸ್–೦೬), ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ ಯೋಜನೆ (ಎಸ್–೦೯) ಮೊದಲಾದ ರಾಜ್ಯ ವಲಯದ ಯೋಜನೆಗಳನ್ನು ಈ ಕಛೇರಿಯು ಅನುಷ್ಠಾನಗೊಳಿಸುತ್ತದೆ. ತೋಟಗಾರಿಕೆ ನಿರ್ದೇಶಕರು, ಲಾಲ್‌ಬಾಗ್, ಬೆಂಗಳೂರು ಅವರು ಈ ಕಛೇರಿಯ ತತ್‌ಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

## ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ ೧೯೮೭ರ ರೀತ್ಯಾ ದಿ. ೨೪–೪–೧೯೯೮ರಲ್ಲಿ ಚಾಮರಾಜನಗರ ನಗರಾಭಿವೃದ್ಧಿ ಪ್ರಾಧಿಕಾರವು ಚಾಮರಾಜನಗರದಲ್ಲಿ ಆರಂಭಗೊಂಡಿತು. ಚಾಮರಾಜನಗರ–ರಾಮಸಮುದ್ರ ಸ್ಥಳೀಯ ಅಧಿಸೂಚಿತ ಯೋಜನಾ ಪ್ರದೇಶದ ವ್ಯಾಪ್ತಿಯನ್ನು ಕಛೇರಿ ಹೊಂದಿದ್ದು, ಬಡಾವಣೆಗಳನ್ನು ರಚಿಸಿ, ನಿವೇಶನಗಳನ್ನು ಹಂಚುವ, ಭೂ–ಪರಿವರ್ತನೆಗಾಗಿ ಅಭಿಪ್ರಾಯ ಕೋರಿ ಬರುವ ಪ್ರಸ್ತಾವನೆಗಳಿಗೆ ಚಾಮರಾಜನಗರ–ರಾಮಸಮುದ್ರ ಮಹಾ ಯೋಜನೆ ಪರಿಷ್ಕೃತ–೧(ಅಂತಿಮ)ರ ಪ್ರಸ್ತಾವಿತ ಭೂ ಉಪಯೋಗ ನಕ್ಷೆ ೨೦೨೧ರ ಪ್ರಕಾರ ತಾಂತ್ರಿಕ ಅಭಿಪ್ರಾಯ ನೀಡುವುದು. ನಕ್ಷೆ ಅನುಮೋದಿಸುವುದು, ಸ್ಥಳೀಯ ಸಂಸ್ಥೆಗಳಿಂದ ಕಟ್ಟಡ ಕಟ್ಟಲು ತಾಂತ್ರಿಕ ಅಭಿಪ್ರಾಯ ಕೋರಿ ಬರುವ ಪ್ರಸ್ತಾವನೆಗಳಿಗೆ ತಾಂತ್ರಿಕ ಅಭಿಪ್ರಾಯ ನೀಡುವುದು ಮುಂತಾದ ಉದ್ದೇಶಗಳನ್ನು ಹೊಂದಿದೆ. ಆಯುಕ್ತರು, ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರ, ಇವರು ಕಛೇರಿಯ ಮುಖ್ಯಸ್ಥರಾಗಿದ್ದು, ಒಬ್ಬ ನಗರ ಯೋಜನಾ ಸದಸ್ಯರು ಮಾತ್ರ ಇದ್ದು, ಉಳಿದ ಸಿಬ್ಬಂದಿಗಾಗಿ ನಗರ ಯೋಜನಾ ಸಹಾಯಕ ನಿರ್ದೇಶಕರು ಚಾಮರಾಜನಗರ ಇವರ ಕಛೇರಿಯ ಸಿಬ್ಬಂದಿಯವರ ನೆರವಿನಿಂದ ಕಛೇರಿಯ ದೈನಂದಿನ ಕೆಲಸಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ ೧೯೬೧ ಹಾಗೂ ಅಧಿನಿಯಮಗಳು, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ ೧೯೮೫ ಹಾಗೂ ಅಧಿನಿಯಮಗಳು ಮತ್ತಿತರ ನಿಯಮ ಹಾಗೂ ಅಧಿನಿಯಮಗಳನ್ನು ತನ್ನ ದಿನನಿತ್ಯದ ಕೆಲಸಕಾರ್ಯಗಳಲ್ಲಿ ಅನುಸರಿಸುತ್ತಿದೆ. ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ನಗರ ಯೋಜನಾ ಇಲಾಖೆ

ನಗರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿಯು ಆಗಸ್ಟ್ ೭, ೧೯೯೮ರಲ್ಲಿ ಚಾಮರಾಜನಗರದಲ್ಲಿ ಆರಂಭಗೊಂಡಿತು. ಸಹಾಯಕ ನಿರ್ದೇಶಕರು, ಈ ಕಛೇರಿಯ ಮುಖ್ಯಸ್ಥರಾಗಿದ್ದು, ಚಾಮರಾಜನಗರ ಜಿಲ್ಲೆಯ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಇವರ ನೆರವಿಗೆ ಇಬ್ಬರು ನಗರಯೋಜಕರು, ಒಬ್ಬ ನಗರ ಯೋಜನಾ ಪರಿವೀಕ್ಷಕರು, ಒಬ್ಬ ಪ್ರಥಮ ದರ್ಜೆ ಸಹಾಯಕ, ಒಬ್ಬ ದ್ವಿತೀಯ ದರ್ಜೆ ಸಹಾಯಕರ ಮತ್ತಿತರ ಸಿಬ್ಬಂದಿ ವರ್ಗವಿದೆ. ಭೂ ಅನ್ಯಕ್ರಾಂತವಾದ ಜಮೀನು ಪ್ರದೇಶಗಳಿಗೆ ರೂಪರೇಖೆ ವಿನ್ಯಾಸ ನಕ್ಷೆ ಅನುಮೋದಿಸುವುದು,

ಸ್ಥಳೀಯ ಸಂಸ್ಥೆಗಳಿಗೆ ನಗರ ಯೋಜನಾ ವಿಷಯಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಸಲಹೆಗಳನ್ನು ನೀಡುವುದು, ಕಟ್ಟಡ ಕಟ್ಟಲು ತಾಂತ್ರಿಕ ಅಭಿಪ್ರಾಯ ನೀಡುವುದು, ಸರ್ಕಾರ/ಸ್ಥಳೀಯ ಸಂಸ್ಥೆಗಳಿಂದ ಕೋರಿಕೆ ಬಂದಲ್ಲಿ ಪಟ್ಟಣ/ನಗರ ಪ್ರದೇಶಗಳಿಗೆ ಮಹಾಯೋಜನೆಯನ್ನು ತಯಾರಿಸುವುದು, ನಗರಾಭಿವೃದ್ಧಿ ಪ್ರಾಧಿಕಾರ/ನಗರ ಯೋಜನಾ ಪ್ರಾಧಿಕಾರ ಕಛೇರಿಗಳಿಗೆ ನಗರ ಯೋಜನೆ ವಿಷಯಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಸಲಹೆಗಳನ್ನು ಮತ್ತು ಕಾರ್ಯಗಳನ್ನು ನಿರ್ವಹಿಸುವುದು, ಪುನರ್ವಸತಿ, ಪುನರ್ ನಿರ್ಮಾಣ ಹಾಗೂ ಸಂಚಾರ ನಿರ್ವಹಣೆ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಯೋಜನೆಗಳನ್ನು ಕೋರಿಕೆಯ ಮೇರೆಗೆ ತಯಾರಿಸುವುದು ಮತ್ತಿತರ ಧ್ಯೇಯೋದ್ದೇಶಗಳು ಹಾಗೂ ಕಾರ್ಯಚಟುವಟಿಕೆಗಳಲ್ಲಿ ಈ ಇಲಾಖೆ ತೊಡಗಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯಿದೆ ೧೯೬೧ ಹಾಗೂ ಅಧಿನಿಯಮಗಳು, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯಿದೆ ೧೯೮೭ ಹಾಗೂ ಅಧಿನಿಯಮಗಳನ್ನು ಕಛೇರಿ ಕೆಲಸ ಕಾರ್ಯಗಳ ನಿರ್ವಹಣೆಯಲ್ಲಿ ಅನ್ವಯಗೊಳಿಸಿಕೊಳ್ಳುತ್ತದೆ. ನಗರ ಯೋಜನಾ ಜಂಟಿ ನಿರ್ದೇಶಕರು ವಿಭಾಗೀಯ ಕಛೇರಿ, ಕುವೆಂಪುನಗರ, ಮೈಸೂರುರವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ

ಶೈಕ್ಷಣಿಕ ಚಟುವಟಿಕೆಗಳ ಮುಖ್ಯ ಸಮನ್ವಯಾಧಿಕಾರಿಯಾಗಿ ಕಾರ್ಯನಿರ್ವಹಿಸುವುದು, ವೃತ್ತಿ ಶಿಕ್ಷಣ ಕಾರ್ಯಗಳು, ಕಾಲೇಜಿನ ತಪಾಸಣೆ, ಪತ್ರಾಂಕಿತ ಅಧಿಕಾರಿಗಳ ಗೌಪ್ಯ ವರದಿ ಬರೆಯುವುದು, ವೇತನ ಬಿಲ್ಲುಗಳಿಗೆ ಮೇಲು ಸಹಿ ಮಾಡುವುದು, ಹೊಸದಾಗಿ ಪದವಿ ಪೂರ್ವ ಕಾಲೇಜ್‌ಗಳನ್ನು ತೆರೆಯಲು ಅರ್ಜಿಗಳನ್ನು ಪರಿಷ್ಕರಿಸುವುದು, ಪ್ರಾಯೋಗಿಕ ಮತ್ತು ವಾರ್ಷಿಕ ಪರೀಕ್ಷೆಗಳನ್ನು ನಡೆಸುವುದು ಹಾಗೂ ಮೇಲ್ವಿಚಾರಣೆ ಮೊದಲಾದ ಧ್ಯೇಯೋದ್ದೇಶಗಳು ಹಾಗೂ ಕಾರ್ಯ ಚಟುವಟಿಕೆಗಳೊಂದಿಗೆ ನವೆಂಬರ್ ೧೩, ೧೯೯೮ ರಂದು ಪದವಿ–ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆಯು ಕಾರ್ಯಾರಂಭ ಮಾಡಿತು. ಉಪ ನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರಿಗೆ ನೆರವಾಗಲು ಅಧೀಕ್ಷಕರು, ದ್ವಿತೀಯ ದರ್ಜೆ ಸಹಾಯಕರು ಮೊದಲಾದ ಸಿಬ್ಬಂದಿ ವರ್ಗವಿದೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ ಮೊದಲಾದ ನಿಯಮ ಅಧಿನಿಯಮಗಳನ್ನು ತನ್ನ ಕಛೇರಿ ಕೆಲಸ ಕಾರ್ಯಗಳಲ್ಲಿ ಅನುಸರಿಸುತ್ತಿದೆ. ಜಿಲ್ಲೆಯಲ್ಲಿ ಇರುವ ಎಲ್ಲಾ ಸರ್ಕಾರಿ ಪದವಿ–ಪೂರ್ವ ಕಾಲೇಜುಗಳು ಉಪನಿರ್ದೇಶಕರ ಅಧೀನದಲ್ಲಿ ಬರುತ್ತವೆ. ಆಯಾ ಕಾಲೇಜಿನ ಪ್ರಾಂಶುಪಾಲರು ಆಯಾ ಕಾಲೇಜಿನ ಮುಖ್ಯಸ್ಥರಾಗಿದ್ದು, ಕಾಲೇಜಿನ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಆಯುಕ್ತರು, ಪದವಿಪೂರ್ವ ಶಿಕ್ಷಣ ಇಲಾಖೆ, ೧೮ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು, ಇವರು ಈ ಕಛೇರಿಯ ತತ್‌ಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

## ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ

ಜಿಲ್ಲೆಯಲ್ಲಿ ಪಶು ಅಭಿವೃದ್ಧಿ ಕಾಯಕ್ರಮಗಳ ಅನುಷ್ಠಾನ ಹಾಗೂ ಆಡಳಿತ ನಿರ್ವಹಣಾ ದೃಷ್ಟಿಯಿಂದ ಚಾಮರಾಜನಗರದಲ್ಲಿ ಪಶುಪಾಲನಾ ಮತ್ತು ಪಶು ವೈದ್ಯ ಸೇವೆಗಳ ಜಿಲ್ಲಾ ಮಟ್ಟದ ಕಛೇರಿಯು ೧೯೯೮ರಲ್ಲಿ ಅಸ್ತಿತ್ವಕ್ಕೆ ಬಂದಿತು. ಇದಕ್ಕೂ ಮೊದಲು ಚಾಮರಾಜನಗರವು ಮೈಸೂರು ಜಿಲ್ಲೆಯ ಒಂದು ಭಾಗವಾಗಿದ್ದ ಸಂದರ್ಭದಲ್ಲಿ ಜಿಲ್ಲಾ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಸಹಾಯಕ ನಿರ್ದೇಶಕರ ನೇತೃತ್ವದಲ್ಲಿ ಮೈಸೂರಿನಲ್ಲಿ ೧೯೫೬ರಿಂದಲೇ ಕಾರ್ಯನಿರ್ವಹಿಸುತ್ತಿತ್ತು. ೧೯೭೫ ರಿಂದ ಹಿರಿಯ ಸಹಾಯಕ ನಿರ್ದೇಶಕರ

ನೇತೃತ್ವದಲ್ಲಿ ಈ ಇಲಾಖೆ ಕಾರ್ಯನಿರ್ವಹಿಸುತ್ತಿತ್ತು. ಪ್ರಸ್ತುತ ಉಪನಿರ್ದೇಶಕರು ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವವರು. ಅವರ ನೆರವಿಗೆ ಸಹಾಯಕ ನಿರ್ದೇಶಕರು, ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು ಮೊದಲಾದ ಅಧಿಕಾರಿ ಸಿಬ್ಬಂದಿಗಳು ಇದ್ದಾರೆ. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು, ಕರ್ನಾಟಕ ಆರ್ಥಿಕ ಸಂಹಿತೆ ಮತ್ತು ಇಲಾಖಾ ಕೈಪಿಡಿ ಹಾಗೂ ಸರ್ಕಾರ ಹಾಗೂ ಜಿಲ್ಲಾ ಪಂಚಾಯತ್‌ನಿಂದ ಆಗಿಂದಾಗ್ಗೆ ಬಿಡುಗಡೆಯಾಗುವ ನಿಯಮ, ಅಧಿನಿಯಮಗಳನ್ನು ಕಛೇರಿ ತನ್ನ ಕೆಲಸದಲ್ಲಿ ಪಾಲಿಸುತ್ತಿದೆ.

ಜಾನುವಾರುಗಳಿಗೆ ರೋಗರುಜಿನಗಳಿಂದ ರಕ್ಷಣೆ, ಪಶುಸಂಪತ್ತು ಮತ್ತು ಪಶು ಸಂತತಿಯ ಅಭಿವೃದ್ಧಿ, ಇಲಾಖೆಗಳಿಗೆ ಸಂಬಂಧಿಸಿದ ಸಾಮಾಜಿಕ ಮತ್ತು ಆರ್ಥಿಕ ಯೋಜನೆಗಳ ಅನುಷ್ಠಾನ, ಮೇವು ಅಭಿವೃದ್ಧಿ, ಪಶು ಆಹಾರ ಅಭಿವೃದ್ಧಿ, ಬರಡು ರಾಸುಗಳ ಚಿಕಿತ್ಸಾ ಶಿಬಿರ, ಸಂಚಾರಿ ಪಶು ಚಿಕಿತ್ಸಾ ಸೌಲಭ್ಯ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ ಮೊದಲಾದವು ಈ ಇಲಾಖೆಯ ಪ್ರಧಾನ ಕಾರ್ಯ ಚಟುವಟಿಕೆಗಳಾಗಿವೆ.

ಪಶುಪಾಲನಾ ಮತ್ತು ವೈದ್ಯಕೀಯ ಸೇವಾ ಇಲಾಖೆ, ಉಪನಿರ್ದೇಶಕರ ಕಛೇರಿ ಚಾಮರಾಜನಗರ ಇವರ ಅಧೀನದಲ್ಲಿ ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ ಹಾಗೂ ಯಳಂದೂರು ತಾಲೂಕುಗಳಲ್ಲಿ ತಾಲೂಕು ಮಟ್ಟದ ಆಸ್ಪತ್ರೆಗಳಿದ್ದು, ಸಹಾಯಕ ನಿರ್ದೇಶಕರುಗಳು ಆಯಾ ತಾಲೂಕಿನಲ್ಲಿ ಇಲಾಖೆಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರುಗಳು ತಾಲೂಕಿನ ನೋಡಲ್ ಅಧಿಕಾರಿಗಳಾಗಿದ್ದು, ಆಯಾ ತಾಲೂಕುಗಳಲ್ಲಿರುವ ಎಲ್ಲಾ ಪಶು ವೈದ್ಯ ಸಂಸ್ಥೆಗಳು ಇವರ ಕಾರ್ಯ ವ್ಯಾಪ್ತಿಯಲ್ಲಿ ಬರುತ್ತವೆ. ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಚಾಮರಾಜನಗರ ಅವರು ಈ ಇಲಾಖೆಯ ಮೇಲಧಿಕಾರಿಗಳಾಗಿರುತ್ತಾರೆ.

## ಪ್ರಾದೇಶಿಕ ಸಾರಿಗೆ ಕಛೇರಿ

ಹೊಸ ವಾಹನಗಳ ನೋಂದಣಿ, ವಾಹನ ಚಾಲನಾ ಅನುಜ್ಞಾ ಪತ್ರ ನೀಡುವುದು ಮೊದಲಾದ ರಸ್ತೆ ಸಾರಿಗೆಗೆ ಸಂಬಂಧಿಸಿದ ಕಾರ್ಯಗಳ ನಿರ್ವಹಣೆ ಮಾಡುವ ಉದ್ದೇಶದಿಂದ ಚಾಮರಾಜನಗರದಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿಯು ದಿನಾಂಕ ೦೧-೧೨-೧೯೮೮ರಂದು ಆರಂಭಗೊಂಡಿತು. ಪ್ರಾದೇಶಿಕ ಸಾರಿಗೆ ಅಧಿಕಾರಿ ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಈ ಹುದ್ದೆ ದಿ.೧-೧೨-೧೯೮೮ ರಿಂದ ೩೧-೩-೧೯೯೩ರವರೆಗೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಎಂದು ಇದ್ದ ಹುದ್ದೆ ದಿನಾಂಕ: ೧-೪-೧೯೯೩ ರಿಂದ ಪ್ರಾದೇಶಿಕ ಸಾರಿಗೆ ಅಧಿಕಾರಿ ಎಂದು ಉನ್ನತೀಕರಿಸಲಾಗಿದೆ. ಇವರ ಅಧೀನದಲ್ಲಿ ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ ಹಾಗೂ ಯಳಂದೂರು ತಾಲೂಕುಗಳು, ಚಿಕ್ಕ ಹೊಳೆ ಹಾಗೂ ಗುಂಡ್ಲುಪೇಟೆ ತನಿಖಾ ಠಾಣೆಗಳು ಕರ್ತವ್ಯ ನಿರ್ವಹಿಸುತ್ತಿವೆ. ಇವರಿಗೆ ನೆರವಾಗಲು ಇಬ್ಬರು ಹಿರಿಯ ಮೋಟಾರು ವಾಹನ ನಿರೀಕ್ಷಕರು, ಇಬ್ಬರು ಮೋಟಾರು ವಾಹನ ನಿರೀಕ್ಷಕರು, ಒಬ್ಬ ಅಧೀಕ್ಷಕರು, ಮೂವರು ಪ್ರಥಮ ದರ್ಜೆ ಸಹಾಯಕರು, ನಾಲ್ಕು ಮಂದಿ ದ್ವಿತೀಯ ದರ್ಜೆ ಸಹಾಯಕರು ಸೇರಿದಂತೆ ಒಟ್ಟು ೨೦ ಮಂದಿ ಅಧಿಕಾರಿ, ಸಿಬ್ಬಂದಿಗಳಿದ್ದಾರೆ. ವಾಹನಗಳ ಮಾಲೀಕತ್ವ ವರ್ಗಾವಣೆ, ವಾಹನಗಳ ಯೋಗ್ಯತಾ ಪ್ರಮಾಣ ಪತ್ರ

ನವೀಕರಿಸುವುದು, ಅಂತರಾಷ್ಟ್ರೀಯ ಚಾಲನಾ ಪತ್ರ ನೀಡುವುದು, ವಾಹನಗಳ ತೆರಿಗೆ ಮತ್ತು ಶುಲ್ಕ ವಸೂಲಾತಿ, ರಸ್ತೆ ಸುರಕ್ಷತಾ ಸಪ್ತಾಹ, ವಾಯುಮಾಲಿನ್ಯ ಸಪ್ತಾಹ ಆಚರಣೆ, ಮೋಟಾರು ವಾಹನ ಇಲಾಖೆಗೆ ಸಂಬಂಧಿಸಿದ ಸಾರ್ವಜನಿಕ ಉಪಯುಕ್ತ ಕಾರ್ಯಕ್ರಮಗಳನ್ನು ನಡೆಸುವುದು ಮತ್ತಿತರ ಕಾರ್ಯಗಳಲ್ಲಿ ಈ ಇಲಾಖೆಯು ತೊಡಗಿದೆ. ಕೇಂದ್ರ ಮೋಟಾರು ವಾಹನ ಕಾಯ್ದೆ ೧೯೮೮, ಕೇಂದ್ರ ಮೋಟಾರು ವಾಹನಗಳ ನಿಯಮಗಳು ೧೯೮೯, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯಿದೆ ಹಾಗೂ ನಿಯಮಗಳು ೧೯೫೭ ಮೊದಲಾದ ನಿಯಮ, ಅಧಿನಿಯಮಗಳನ್ನು ಈ ಕಛೇರಿಯು ತನ್ನ ಕಾರ್ಯಗಳಲ್ಲಿ ಅನುಸರಿಸುತ್ತಿದೆ. ಉಪಸಾರಿಗೆ ಆಯುಕ್ತರು, ಮೈಸೂರು ವಿಭಾಗ, ಮೈಸೂರು ಅವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಪೊಲೀಸ್ ಸೂಪರಿಂಟೆಂಡೆಂಟ್‌ರವರ ಕಛೇರಿ

ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ನಾಗರೀಕರ ರಕ್ಷಣೆ ಹಾಗೂ ಎಲ್ಲಾ ರೀತಿಯ ಅಪರಾಧಗಳನ್ನು ತಡೆಗಟ್ಟುವ ಉದ್ದೇಶದಿಂದ ಜಿಲ್ಲಾ ಪೊಲೀಸ್ ಕಛೇರಿ ಆಗಸ್ಟ್ ೧೫, ೧೯೯೭ರಲ್ಲಿ ಆರಂಭಗೊಂಡಿತು. ಈ ಕಛೇರಿಯ ಮುಖ್ಯಸ್ಥರಾಗಿರುವ ಜಿಲ್ಲಾ ಪೊಲೀಸ್ ಅಧೀಕ್ಷಕರು ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಇವರಿಗೆ ಆಡಳಿತದಲ್ಲಿ ನೆರವಾಗಲು ಒಬ್ಬ ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ಮೂವರು ಉಪ ಪೊಲೀಸ್ ಅಧೀಕ್ಷಕರು, ಒಂಭತ್ತು ಮಂದಿ ಪೊಲೀಸ್ ಇನ್ಸ್‌ಪೆಕ್ಟರ್‌ಗಳು, ೨೪ ಮಂದಿ ಸಬ್-ಇನ್ಸ್‌ಪೆಕ್ಟರ್‌ಗಳು (ನಾಗರೀಕ), ಒಬ್ಬ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್, ಮಹಿಳೆ), ೩೭ ಸಹಾಯಕ ಸಬ್-ಇನ್ಸ್‌ಪೆಕ್ಟರ್‌ಗಳು (ಸಿವಿಲ್, ಪುರುಷ ಹಾಗೂ ಮಹಿಳೆ), ೧೯೨ ಮುಖ್ಯ ಪೇದೆಗಳು (ಸಿವಿಲ್, ಪುರುಷರು ಹಾಗೂ ಮಹಿಳೆ) ಹಾಗೂ ೫೦೭ ಜಿಲ್ಲಾ ಸಶಸ್ತ್ರ ಮೀಸಲು ಪಡೆ (D.A.R) (ಪಿ.ಎಂ.ಟಿ.ಗಾಗಿ ಶ್ವಾನದಳ ಸೇರಿದಂತೆ)ಯಲ್ಲಿ ಒಬ್ಬ ಸಶಸ್ತ್ರ ಮೀಸಲು ಇನ್ಸ್‌ಪೆಕ್ಟರ್ (R.P.I), ಇಬ್ಬರು ಸಶಸ್ತ್ರ ಮೀಸಲು ಸಬ್-ಇನ್ಸ್‌ಪೆಕ್ಟರ್ (R.S.I), ಐದು ಮಂದಿ ಸಹಾಯಕ ಸಶಸ್ತ್ರ ಮೀಸಲು ಸಬ್-ಇನ್ಸ್‌ಪೆಕ್ಟರ್‌ಗಳು (A.R.S.I), ಸಶಸ್ತ್ರ ಮೀಸಲು ಪಡೆಯ ಮುಖ್ಯ ಪೇದೆ (AHC) ಹಾಗೂ ೨೪೬ ಸಶಸ್ತ್ರ ಮೀಸಲು ಪೊಲೀಸ್ ಪೇದೆಗಳು ಹಾಗೂ ಇತರೆ ಸಿಬ್ಬಂದಿ ವರ್ಗವಿತ್ತು.

ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ಹಣಕಾಸು ಸಂಹಿತೆ, ಭಾರತ ದಂಡಸಂಹಿತೆ (I.P.C.), ಅಪರಾಧ ಪ್ರಕ್ರಿಯೆ ದಂಡ ಸಂಹಿತೆ (C.R.P.C) ಮತ್ತಿತರ ನಿಯಮ ಅಧಿನಿಯಮಗಳನ್ನು ತನ್ನ ಕಛೇರಿಯ ಕಾರ್ಯನಿರ್ವಹಣೆಯಲ್ಲಿ ಬಳಸಲಾಗುತ್ತಿದೆ. ಈ ಕಛೇರಿಯ ಅಧೀನ ಕಛೇರಿಗಳು ಹೀಗಿವೆ. ಜಿಲ್ಲೆಯಲ್ಲಿ ಎರಡು ಉಪವಿಭಾಗಗಳಿದ್ದು, ಚಾಮರಾಜನಗರ ಉಪವಿಭಾಗದಲ್ಲಿ ಚಾಮರಾಜನಗರ ಗ್ರಾಮಾಂತರ ಹಾಗೂ ಗುಂಡ್ಲುಪೇಟೆಗಳಲ್ಲಿ ಎರಡು ಸರ್ಕಲ್ ಇನ್ಸ್‌ಪೆಕ್ಟರ್‌ಗಳ ಕಛೇರಿ, ಏಳು ಪೊಲೀಸ್ ಠಾಣೆಗಳು, ನಾಲ್ಕು ಪೊಲೀಸ್ ಹೊರ ಠಾಣೆಗಳು ಕರ್ತವ್ಯದಲ್ಲಿ ತೊಡಗಿದ್ದರೆ, ಕೊಳ್ಳೇಗಾಲ ವಿಭಾಗಕ್ಕೆ ಕೊಳ್ಳೇಗಾಲ ಮತ್ತು ಯಳಂದೂರು ತಾಲೂಕುಗಳು ಸೇರುತ್ತವೆ. ಈ ಉಪವಿಭಾಗದಲ್ಲಿ ಕೊಳ್ಳೇಗಾಲ ಹಾಗೂ ಯಳಂದೂರುಗಳಲ್ಲಿ ಎರಡು ಸರ್ಕಲ್ ಇನ್ಸ್‌ಪೆಕ್ಟರ್‌ಗಳ ಕಚೇರಿ, ಏಳು ಪೊಲೀಸ್ ಠಾಣೆಗಳು, ನಾಲ್ಕು ಪೊಲೀಸ್ ಹೊರ ಠಾಣೆಗಳು ಕರ್ತವ್ಯದಲ್ಲಿ ತೊಡಗಿದ್ದವು. ಅಲ್ಲದೆ ಒಂದು ಜಿಲ್ಲಾ ಸಶಸ್ತ್ರ ಮೀಸಲು ಪಡೆ ಇದೆ. ಜಿಲ್ಲೆಯಲ್ಲಿ ಶಾಂತಿ ಪಾಲನೆಗೆ ನೆರವಾಗಿರುವ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ ಹಾಗೂ ಮಲೆಮಹದೇಶ್ವರ ಬೆಟ್ಟಗಳಲ್ಲಿ ಪೊಲೀಸ್ ವಸತಿಗೃಹಗಳ ನಿರ್ಮಾಣ ಮಾಡಲಾಗುತ್ತಿದೆ. ಕೊಳ್ಳೇಗಾಲ ಹಾಗೂ ಚಾಮರಾಜನಗರದಲ್ಲಿ ಹೊಸ ಪೊಲೀಸ್ ಠಾಣೆ ತೆರೆಯುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಪೊಲೀಸ್ ಮಹಾನಿರೀಕ್ಷಕರು ದಕ್ಷಿಣ ವಲಯ, ಮೈಸೂರು ಅವರು ಈ ಕಛೇರಿಯ ತಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

## ಬಂಡವಾಳ ಹೂಡಿಕೆ ಮಾಹಿತಿ ನಿರ್ವಹಣೆ ಹಾಗೂ ವಸೂಲಾತಿ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಇಲಾಖೆ

ಬಂಡವಾಳ ಹೂಡಿಕೆ, ಮಾಹಿತಿ ಸಂಗ್ರಹಣೆ (ಇಲಾಖೆಗಳು, ಕಾರ್ಪೋರೇಷನ್‌ಗಳು, ಸಂಸ್ಥೆಗಳು) ಸಾಲ ಮಂಜೂರಾತಿ ಬಗ್ಗೆ ಅಂಕಿಅಂಶಗಳನ್ನು ಕ್ರೋಢೀಕರಿಸುವುದು, ಹೆಚ್ಚು ಸಂಗ್ರಹಣೆ ಬಗ್ಗೆ ಗಮನಹರಿಸುವುದು, ಸಣ್ಣ ಉಳಿತಾಯ ಏಜೆಂಟರುಗಳಿಗೆ ಇರುವ ತೊಂದರೆ ಬಗ್ಗೆ ಗಮನಹರಿಸುವುದು, ಸಾರ್ವಜನಿಕರಲ್ಲಿ ಉಳಿತಾಯದ ಮನೋಭಾವವನ್ನು ಬೆಳೆಸುವುದಲ್ಲದೆ, ಅಂಚೆ ಕಛೇರಿಯ ಸಣ್ಣ ಉಳಿತಾಯ ಯೋಜನೆಗಳಲ್ಲಿ ಹಣ ತೊಡಗಿಸುವಂತೆ ಅವರನ್ನು ಪ್ರೇರೇಪಿಸುವ ಮೂಲಕ ಸರ್ಕಾರಕ್ಕೆ ಉಪಯುಕ್ತವಾದ ಸಂಪನ್ಮೂಲವನ್ನು ಕ್ರೋಢೀಕರಿಸುವುದು, ಅನಧಿಕೃತ ಲಾಟರಿ ಬಗ್ಗೆ ನಿಗಾವಹಿಸುವುದು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಾಮೂಹಿಕ ವಿಮೆ ಯೋಜನೆಗಳ ಬಗ್ಗೆ ತಪಾಸಣೆ, ತಿಳುವಳಿಕೆ ಮತ್ತಿತರ ಧ್ಯೇಯೋದ್ದೇಶಗಳು ಮತ್ತು ಕಾರ್ಯ ಚಟುವಟಿಕೆಗಳೊಂದಿಗೆ ಈ ಕಛೇರಿಯು ನವೆಂಬರ್ ೨೦, ೧೯೯೮ರಲ್ಲಿ ಅಸ್ತಿತ್ವಕ್ಕೆ ಬಂದಿತು. ಸಹಾಯಕ ನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಚಾಮರಾಜನಗರ ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಅವರಿಗೆ ಆಡಳಿತದಲ್ಲಿ ನೆರವಾಗಲು ಒಬ್ಬ ಅಭಿವೃದ್ಧಿ ಅಧಿಕಾರಿ, ದ್ವಿತೀಯ ದರ್ಜೆ ಸಹಾಯಕ, ಮತ್ತಿತರಿದ್ದಾರೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ಹಣಕಾಸು ಸಂಹಿತೆ, ಲಾಟರಿ ರೆಗ್ಯೂಲೇಷನ್ ಆಕ್ಟ್ ೧೯೯೬ ಮತ್ತಿತರ ನಿಯಮ ಅಧಿನಿಯಮಗಳನ್ನು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತಿದೆ. ತಾಲೂಕು ಮಟ್ಟದಲ್ಲಿ ಸಹಾಯಕ ಅಭಿವೃದ್ಧಿ ಅಧಿಕಾರಿಗಳಿದ್ದು, ಆಯಾ ತಾಲೂಕು ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ನಿರ್ದೇಶಕರು, ಬಂಡವಾಳ ಹೂಡಿಕೆ ಮಾಹಿತಿ ನಿರ್ವಹಣೆ ಹಾಗೂ ವಸೂಲಾತಿ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಇಲಾಖೆ ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಕಛೇರಿಯು ನವೆಂಬರ್ ೧೯೯೮ರಲ್ಲಿ ಚಾಮರಾಜನಗರದಲ್ಲಿ ಆರಂಭಗೊಂಡಿತು. ಈ ಕಛೇರಿಯ ಮುಖ್ಯಸ್ಥರ ಹುದ್ದೆಯು ಆಗ ಸಹಾಯಕ ನಿರ್ದೇಶಕ ಎಂದು ಇದ್ದದ್ದು, ೨೦೦೩ ರಿಂದ ಉಪನಿರ್ದೇಶಕ ಎಂದು ಬದಲಾವಣೆಗೊಂಡಿರುತ್ತದೆ. ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಈ ಕಛೇರಿಯಲ್ಲಿ ಜಿಲ್ಲಾ ನಿರೂಪಣಾಧಿಕಾರಿ; ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ, ಕಛೇರಿ ಅಧೀಕ್ಷಕರು, ವಿಶೇಷ ಪೌಷ್ಠಿಕ ಆಹಾರ ನಿರೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ಅಂಕಿಅಂಶ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಅಭಿವೃದ್ಧಿ ನಿರೀಕ್ಷಕರು ಮೊದಲಾದ ಅಧಿಕಾರಿ ಸಿಬ್ಬಂದಿ ಇದ್ದಾರೆ. ಬಾಲನ್ಯಾಯ ಕಾಯ್ದೆ–೨೦೦೦, ವರದಕ್ಷಿಣೆ ನಿಷೇಧ ಕಾಯ್ದೆ–೨೦೦೪, ಬಾಲ ಕಾರ್ಮಿಕರ ನಿಷೇಧ ಮತ್ತು ನಿಯಂತ್ರಣ ಕಾಯ್ದೆ, ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ–೨೦೦೫, ಅನೈತಿಕ ವ್ಯವಹಾರ ಅಧಿನಿಯಮ–೧೯೫೬, ಕರ್ನಾಟಕ ನಾಗರೀಕ ಸೇವಾ ನಿಯಮಗಳು ಮತ್ತಿತರ ನಿಯಮ ಅಧಿನಿಯಮಗಳನ್ನು ತನ್ನ ಕಾರ್ಯನಿರ್ವಹಣೆಯಲ್ಲಿ ಬಳಸುತ್ತಿದೆ.

ಗರ್ಭಿಣಿ ಬಾಣಂತಿಯರಲ್ಲಿ ಅಪೌಷ್ಠಿಕತೆ ನಿವಾರಿಸಿ, ಶಿಶು ಮರಣ ಮತ್ತು ಗರ್ಭಿಣಿ ಬಾಣಂತಿಯರ ಮರಣವನ್ನು ಕಡಿಮೆ ಮಾಡುವುದು, ಸ್ತ್ರೀ ಶಕ್ತಿ ಗುಂಪುಗಳ ರಚನೆ, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಆರ್ಥಿಕ ಮತ್ತು ಕಾನೂನು ಸಹಾಯ ನೀಡುವುದು, ಗ್ರಾಮೀಣ ಹೆಣ್ಣು ಮಕ್ಕಳಿಗೆ ಶಾಲಾ ಹಾಜರಾತಿ ಶಿಷ್ಯವೇತನ ನೀಡುವುದು, ಮಕ್ಕಳ ಕಲ್ಯಾಣಕ್ಕೆ ಶ್ರಮಿಸಿದವರಿಗೆ ಪ್ರಶಸ್ತಿ ನೀಡುವುದು, ರಾಷ್ಟ್ರೀಯ ಹೆರಿಗೆ ಭತ್ಯೆ

ಯೋಜನೆ, ನಿರ್ಗತಿಕ ಹಾಗೂ ಅನಾಥ ಮಕ್ಕಳಿಗಾಗಿ ಕುಟೀರ ಸ್ಥಾಪನೆ ಮೊದಲಾದ ಧ್ಯೇಯೋದ್ಧೇಶಗಳನ್ನು ಈ ಇಲಾಖೆಯು ಹೊಂದಿದೆ.

ಜಿಲ್ಲಾ ವಲಯ ಯೋಜನೆಗಳಾದ ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮ ಅಂಗನವಾಡಿ ಕಟ್ಟಡಗಳ ನಿರ್ಮಾಣ, ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳಿಗೆ ಹಾಜರಾತಿ ಶಿಷ್ಯವೇತನ, ಶಿಶುಪಾಲನಾ ಕೇಂದ್ರಗಳು (ರಾಜ್ಯ) ನಿರ್ಗತಿಕ ಮಕ್ಕಳ ಪಾಲನೆ ಮತ್ತು ಪೋಷಣೆ ಯೋಜನೆ; ರಾಜ್ಯ ವಲಯ ಯೋಜನೆಗಳಾದ ಸಾಂತ್ವನ–ಮಹಿಳಾ ಸಹಾಯವಾಣಿ ಕೇಂದ್ರಗಳು, ನಮ್ಮ ಮಗಳು ನಮ್ಮ ಶಕ್ತಿ ಯೋಜನೆ; ಭಾಗ್ಯಲಕ್ಷ್ಮಿ ಯೋಜನೆ, ಬಾಲಿಕಾ ಸಮೃದ್ಧಿ ಯೋಜನೆ, ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಮರಣ ಪರಿಹಾರ ಹಾಗೂ ತೀವ್ರತರ ಕಾಯಿಲೆಗಳಿಗೆ ನೀಡುವ ಆರ್ಥಿಕ ನೆರವು ಯೋಜನೆ, ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ರಾಜ್ಯ ಪ್ರಶಸ್ತಿ, ಶೌರ್ಯ ಪ್ರಶಸ್ತಿ ಪಡೆದ ಮಕ್ಕಳ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು, ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ; ಕೇಂದ್ರ ಸರ್ಕಾರದ ಯೋಜನೆಗಳಾದ ಕಿಶೋರಿ ಶಕ್ತಿ ಯೋಜನೆ, ಸ್ವದೇಶಿ ದತ್ತು ಪ್ರೋತ್ಸಾಹಿಸಲು ಮಕ್ಕಳ ಸಂಸ್ಥೆಗಳಿಗೆ ಆರ್ಥಿಕ ನೆರವು, ಸ್ವಯಂಸಿದ್ಧ ಯೋಜನೆ ಮಹಿಳೆಯರಿಗೆ ಹಾಗೂ ಬಾಲಕಿಯರಿಗೆ ಅಲ್ಪಾವಧಿ ವಸತಿಗೃಹ ಯೋಜನೆ, ಮದ್ಯಪಾನ ಹಾಗೂ ಮಾದಕ ವಸ್ತುಗಳ ಸೇವನೆ ತಡೆಗಟ್ಟಲು ಯೋಜನೆ, ಅಸಾಧಾರಣ ಸಾಧನೆ ಮಾಡಿದ ಮಕ್ಕಳಿಗೆ ರಾಷ್ಟ್ರ ಪ್ರಶಸ್ತಿ ಮತ್ತಿತರ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳು ಹಾಗೂ ಅಂಗವಿಕಲರ ಹಾಗೂ ಹಿರಿಯ ನಾಗರೀಕ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗುತ್ತಿದೆ.

ಈ ಕಛೇರಿಯ ಅಧೀನದಲ್ಲಿ ಒಂದು ಬಾಲಕಿಯರ ಬಾಲಮಂದಿರವಿದ್ದು, ಅಧೀಕ್ಷಕರು, ಪರಿವೀಕ್ಷಣಾಧಿಕಾರಿಗಳು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಅಪರಾಧಿಗಳ ಪರಿವೀಕ್ಷಣಾದಿ ನಿಲಯವಿದ್ದು, ಪರಿವೀಕ್ಷಣಾಧಿಕಾರಿಗಳು, ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣಾಧಿಕಾರಿಗಳ ಕಛೇರಿಯಿದ್ದು, ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವಿದ್ದು, ಜಿಲ್ಲಾ ವ್ಯವಸ್ಥಾಪಕರು ಇದರ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ನಾಲ್ಕು ತಾಲೂಕು ಮಟ್ಟದಲ್ಲಿ ಶಿಶು ಅಭಿವೃದ್ಧಿ ಯೋಜನೆಗಳ ಕೇಂದ್ರಗಳಿದ್ದು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಈ ಕಛೇರಿಗಳ ಮುಖ್ಯಸ್ಥರುಗಳಾಗಿದ್ದು, ತಾಲೂಕು ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ನಿರ್ದೇಶಕರು ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರು ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ರೇಷ್ಮೆ ಇಲಾಖೆ

ಜಿಲ್ಲೆಯಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿಪಡಿಸುವ ಮೂಲಕ ರೇಷ್ಮೆ ಬೆಳೆಗಾರರಿಗೆ ಅನುಕೂಲಕರವಾದ ರೇಷ್ಮೆ ಬೆಳೆ ಹಾಗೂ ಉತ್ತಮ ಗುಣಮಟ್ಟದ ಗೂಡನ್ನು ಉತ್ಪಾದಿಸಲು ಎಲ್ಲಾ ರೀತಿಯ ತಾಂತ್ರಿಕ ನೆರವು ಹಾಗೂ ಅಗತ್ಯ ಸಲಕರಣೆಗಳ ಉಚಿತ ಸೌಲಭ್ಯ ನೀಡುವುದು ಹಾಗೂ ರೇಷ್ಮೆ ಉದ್ದಿಮೆದಾರರಿಗೆ ನೆರವಾಗುವ ಉದ್ದೇಶದಿಂದ ಚಾಮರಾಜನಗರದಲ್ಲಿ ೨೦೦೦ನೇ ಇಸವಿಯಲ್ಲಿ ರೇಷ್ಮೆ ಉಪನಿರ್ದೇಶಕರ ಕಛೇರಿ

ಪ್ರಾರಂಭಗೊಂಡಿತು. ಇದಕ್ಕೂ ಮೊದಲು ಮೈಸೂರಿನಲ್ಲಿ ಈ ಕಛೇರಿಯು ೧೯೭೧ರಲ್ಲಿ ಆರಂಭಗೊಂಡಿತ್ತು. ಉಪನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಇವರ ನೆರವಿಗೆ ರೇಷ್ಮೆ ಸಹಾಯಕ ನಿರ್ದೇಶಕರು, ಪತ್ರಾಂಕಿತ ವ್ಯವಸ್ಥಾಪಕರು–II, ಅಧೀಕ್ಷಕರು, ರೇಷ್ಮೆ ನಿರೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿ ಇದ್ದಾರೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕೆ.ಎಫ್.ಸಿ, ಮತ್ತಿತ್ತರ ನಿಯಮ ಅಧಿನಿಯಮಗಳನ್ನು ತನ್ನ ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಅನುಸರಿಸುತ್ತಿದೆ. ರೇಷ್ಮೆ ಸಹಾಯಕ ನಿರ್ದೇಶಕರು, ಗುಂಡ್ಲುಪೇಟೆ ತಾಲೂಕು, ರೇಷ್ಮೆ ಸಹಾಯಕ ನಿರ್ದೇಶಕರು, ಯಳಂದೂರು ತಾಲೂಕು; ರೇಷ್ಮೆ ಕೃಷಿ ವಿಸ್ತರಣಾಧಿಕಾರಿ, ತಾಂತ್ರಿಕ ಸೇವಾ ಕೇಂದ್ರ ಚಾಮರಾಜನಗರ, ಕುದೇರು, ಕಾಗಲವಾಡಿ; ರೇಷ್ಮೆ ಕೃಷಿ ವಿಸ್ತರಣಾಧಿಕಾರಿ–ತಾಂತ್ರಿಕ ಸೇವಾ ಕೇಂದ್ರ, ಹರವೆ ಹಾಗೂ ವೆಂಕಟಯ್ಯನ ಛತ್ರ; ರೇಷ್ಮೆ ಕೃಷಿ ವಿಸ್ತರಣಾಧಿಕಾರಿ–ತಾಂತ್ರಿಕ ಸೇವಾ ಕೇಂದ್ರ ಚಿಲಕವಾಡಿ, ಮುಡಿಗುಂದ, ಕಾಮಗೆರೆ, ಹನೂರು, ಒಡೆಯರಪಾಳ್ಯ, ಪಾಳ್ಯ; ರೇಷ್ಮೆ ಬಿತ್ತನೆ ಕೋಠಿ ಹನೂರು; ತಾಂತ್ರಿಕ ಸೇವಾ ಕೇಂದ್ರ, ರಾಮಾಪುರ; ರೇಷ್ಮೆ ಕೃಷಿ ವಿಸ್ತರಣಾಧಿಕಾರಿ ತಾಂತ್ರಿಕ ಸೇವಾ ಕೇಂದ್ರ, ಗುಂಡ್ಲುಪೇಟೆ ಕಬ್ಬಹಳ್ಳಿ; ರೇಷ್ಮೆ ಕೃಷಿ ವಿಸ್ತರಣಾಧಿಕಾರಿ ತಾಂತ್ರಿಕ ಸೇವಾ ಕೇಂದ್ರ, ಯಳಂದೂರು; ರೇಷ್ಮೆ ಕೃಷಿ ವಿಸ್ತರಣಾಧಿಕಾರಿ ತಾಂತ್ರಿಕ ಸೇವಾ ಕೇಂದ್ರ, ಹೊನ್ನೂರು ಈ ಕಛೇರಿಯ ಅಧೀನದಲ್ಲಿ ಬರುವ ಇತರ ಕಛೇರಿಗಳಾಗಿವೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಚಾಮರಾಜನಗರ ಇವರು ಈ ಕಛೇರಿಯ ತತ್‌ಕ್ಷಣದ ಮೇಲಧಿಕಾರಿಗಳಾಗಿದ್ದಾರೆ.

## ವಾರ್ತಾ ಇಲಾಖೆ

ಸರ್ಕಾರದ ಪ್ರಗತಿಪರ ಕಾರ್ಯಕ್ರಮಗಳು, ಯೋಜನೆಗಳು ಹಾಗೂ ಸಾಧನೆಗಳನ್ನು ದೃಕ್, ಶ್ರವಣ ಮತ್ತಿತರ ಮಾಧ್ಯಮಗಳ ಮೂಲಕ ಸಾರ್ವಜನಿಕರಿಗೆ ಆಕರ್ಷಕವಾಗಿ ತಿಳಿಸಿಕೊಡುವುದು, ಸಾಮಾಜಿಕ ಅರಿವಿನ ಬಗ್ಗೆ ಜಾಗೃತಿ ಉಂಟುಮಾಡುವುದು, ಸಾರ್ವಜನಿಕರು ಹಾಗೂ ಸರ್ಕಾರದ ನಡುವೆ ಸಂಪರ್ಕ ಕೊಂಡಿಯಾಗಿ ಕೆಲಸ ಮಾಡುವ ಧ್ಯೇಯೋದ್ದೇಶಗಳೊಂದಿಗೆ ಚಾಮರಾಜನಗರದಲ್ಲಿ ವಾರ್ತಾ ಇಲಾಖೆಯು ದಿ. ೫–೪–೧೯೯೯ ರಿಂದ ಆರಂಭಗೊಂಡಿತು. ಇದಕ್ಕೂ ಮೊದಲು ಮೈಸೂರಿನಲ್ಲಿ ೧೯೫೬ರಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆಯು ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಯ ನೇತೃತ್ವದಲ್ಲಿ ಆರಂಭಗೊಂಡಿತ್ತು. ಜಿಲ್ಲಾ ವ್ಯಾಪ್ತಿಯ ಆಡಳಿತಾಧಿಕಾರ ಹೊಂದಿರುವ ಹಿರಿಯ ಸಹಾಯಕ ನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಸಹಾಯಕ ನಿರ್ದೇಶಕರು, ವಾರ್ತಾ ಸಹಾಯಕರು, ಪ್ರಥಮ ದರ್ಜೆ ಸಹಾಯಕ, ಸಿನಿಚಾಲಕರು ಮತ್ತಿತರ ಅಧಿಕಾರಿ ಸಿಬ್ಬಂದಿಗಳು ಇವರಿಗೆ ಕಛೇರಿ ಕೆಲಸ ಕಾರ್ಯಗಳಲ್ಲಿ ನೆರವಾಗುತ್ತಿದ್ದಾರೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ, ಸಾದಿಲ್ವಾರು ವೆಚ್ಚ ಕೈಪಿಡಿ, ಕರ್ನಾಟಕ ವೆಚ್ಚ ಕೈಪಿಡಿ ಮತ್ತಿತರ ನಿಯಮ ಅಧಿನಿಯಮಗಳನ್ನು ತನ್ನ ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಪಾಲಿಸುತ್ತಿದೆ.

ವಾರ್ತಾ ಇಲಾಖೆಯು ಸರ್ಕಾರ ಮತ್ತು ಸಾರ್ವಜನಿಕರ ನಡುವೆ ಸೇತುವೆಯಂತೆ ಕಾರ್ಯನಿರ್ವಹಿಸುತ್ತಿದೆ. ಸರ್ಕಾರದ ಜನಪರ ಅಭಿವೃದ್ಧಿಯ ಯೋಜನೆಗಳ ಅರಿವನ್ನು ಚಲನಚಿತ್ರ, ವಸ್ತುಪ್ರದರ್ಶನ, ತಜ್ಞರಿಂದ ವಿಚಾರ ಗೋಷ್ಠಿಗಳು, ಶಿಕ್ಷಣ, ಆರೋಗ್ಯ, ಕಾನೂನು ಹಾಗೂ ಇತರ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಗೆ, ಗ್ರಾಮಾಂತರ ಪ್ರದೇಶದ ಜನರಿಗೆ ತಿಳುವಳಿಕೆ ನೀಡುವುದು, ಗ್ರಾಮಾಂತರ ಹಾಗೂ ನಗರ ಪ್ರದೇಶಗಳಿಗೆ ಸಂಬಂಧಿಸಿದಂತೆ ಆಗಬೇಕಾದ ಅಭಿವೃದ್ಧಿ ಕಾರ್ಯಗಳು, ಶ್ರೀ ಸಾಮಾನ್ಯರ ಜೀವನಮಟ್ಟ ಸುಧಾರಿಸಲು ಆಗಬೇಕಾದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಜನಪ್ರತಿನಿಧಿಗಳು, ಚುನಾಯಿತ ಪ್ರತಿನಿಧಿಗಳ ಮೂಲಕ ಮಾಧ್ಯಮಗಳ

ಮೂಲಕ ಸರ್ಕಾರದ ಗಮನಕ್ಕೆ ತರುವುದು, ಸರ್ಕಾರದ ಯೋಜನೆಗಳನ್ನು ಫಲಾನುಭವಿಗಳು ಯಾವ ರೀತಿ ಪಡೆಯಬಹುದು ಎಂಬುದು ಸೇರಿದಂತೆ ಸರ್ಕಾರದ ಜನಪರ ಅಭಿವೃದ್ಧಿಯ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡಿ ಹೆಚ್ಚಿನ ರೀತಿಯಲ್ಲಿ ಪ್ರಚಾರ ಹಮ್ಮಿಕೊಳ್ಳುವುದು, ಮಾನ್ಯ ಸಚಿವರ ಪ್ರವಾಸ, ಜನಪ್ರತಿನಿಧಿಗಳ, ಪ್ರಗತಿಪರ ರೈತರ ಪತ್ರಿಕಾಗೋಷ್ಠಿಗಳು, ಮಾಧ್ಯಮ ಪ್ರತಿನಿಧಿಗಳೊಂದಿಗೆ ಸಂವಾದ, ಉನ್ನತ ಅಧಿಕಾರಿಗಳ ಪತ್ರಿಕಾ ಸಮಾವೇಶ, ಪತ್ರಿಕಾ ಪ್ರಕಟಣೆಗಳ ಬಿಡುಗಡೆ, ಪಾರದರ್ಶಕ ದೃಷ್ಟಿಯಿಂದ ಟೆಂಡರ್‌ಗಳು, ಜಾಹಿರಾತುಗಳನ್ನು ಬಿಡುಗಡೆ ಮೊದಲಾದ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುತ್ತಿದೆ. ಅಲ್ಲದೆ ಗ್ರಾಮವಾಹಿನಿ, ಗ್ರಾಮಸಂಪರ್ಕ, ವಿಚಾರಸಂಕೀರ್ಣ ಮೊದಲಾದ ಯೋಜನೆಗಳನ್ನು ಇಲಾಖೆಯು ಹಮ್ಮಿಕೊಂಡಿರುತ್ತದೆ. ಉಪನಿರ್ದೇಶಕರು, ವಾರ್ತಾ ಇಲಾಖೆ, ಮೈಸೂರು, ಆಯುಕ್ತರು ವಾರ್ತಾ ಇಲಾಖೆ ಬೆಂಗಳೂರು ಇವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಸಣ್ಣ ನೀರಾವರಿ

ಜಲಸಂಪನ್ಮೂಲ ಇಲಾಖೆಗೆ ಸೇರಿದ ಸಣ್ಣ ನೀರಾವರಿ ಉಪವಿಭಾಗ, ಚಾಮರಾಜನಗರ ಈ ಕಛೇರಿಯು ಸಣ್ಣ ನೀರಾವರಿ ಕಾಮಗಾರಿಗಳು, ಕೆರೆಗಳು, ಪಿಕಪ್‌ಗಳು, ಏತನೀರಾವರಿ ಯೋಜನೆಗಳ ನಿರ್ವಹಣೆ ಹಾಗೂ ಉಸ್ತುವಾರಿ ನೋಡಿಕೊಳ್ಳುವ ಉದ್ದೇಶದೊಂದಿಗೆ ೧೯೮೨ರಲ್ಲಿ ಆರಂಭಗೊಂಡಿತು. ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಇವರಿಗೆ ಆಡಳಿತದಲ್ಲಿ ನೆರವಾಗಲು ನಾಲ್ಕು ಮಂದಿ ಸಹಾಯಕ ಇಂಜಿನಿಯರ್, ಮೂವರು ಕಿರಿಯ ಅಭಿಯಂತರರು, ಒಬ್ಬ ಪ್ರಥಮ ದರ್ಜೆ ಸಹಾಯಕ, ಒಬ್ಬ ಪ್ರಥಮ ದರ್ಜೆ ಭೂಮಾಪಕ ಮತ್ತಿತರ ಸಿಬ್ಬಂದಿ ವರ್ಗವಿದೆ. ಜಿಲ್ಲೆಯಲ್ಲಿ ಒಟ್ಟು ೬೨ ಕೆರೆಗಳು, ೧೩ ಪಿಕಪ್‌ಗಳು ಹಾಗೂ ಐದು ಏತ ನೀರಾವರಿ ಯೋಜನೆಗಳ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದು, ೧೫,೪೭೫ ಹೆ. ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಿ ಅವುಗಳ ನಿರ್ವಹಣೆ ಮಾಡಲಾಗುತ್ತಿದೆ. ಅಲ್ಲದೆ ನಾಲ್ಕು ತಾಲೂಕಿನ ಕಾಮಗಾರಿಗಳ ಉಸ್ತುವಾರಿಯನ್ನು ನಾಲ್ಕು ಇಂಜಿನಿಯರ್‌ಗಳು ನೋಡಿಕೊಳ್ಳುತ್ತಿದ್ದಾರೆ.

ಈ ಕಛೇರಿಯು ಲೋಕೋಪಯೋಗಿ ಇಲಾಖೆ, ಸಂಹಿತೆ ಭಾಗ–I ಮತ್ತು II, ಕರ್ನಾಟಕ ಪಾರದರ್ಶಕ ಅಧಿನಿಯಮ, ಲೋಕೋಪಯೋಗಿ ಲೆಕ್ಕ ಸಂಹಿತೆ ಭಾಗ–I ಮತ್ತು II, ಭೂ ಸ್ವಾಧೀನ ಕಾಯಿದೆ, ಉಗ್ರಾಣ ಕೈಪಿಡಿ, ಕರ್ನಾಟಕ ನೀರಾವರಿ ಕಾಯಿದೆ, ಕರ್ನಾಟಕ ನೀರಾವರಿ (ನೀರಿನ ಕರ ವಿಧಿಸುವುದು) ನಿಯಮ ೧೯೬೫, ನೀರಾವರಿ ಕೈಪಿಡಿ ೧೯೭೪, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ, ಸಾದಿಲ್ವಾರು ವೆಚ್ಚಗಳ ಕೈಪಿಡಿ ಮತ್ತಿತರ ನಿಯಮ ಅಧಿನಿಯಮಗಳನ್ನು ತನ್ನ ಕೆಲಸ ಕಾರ್ಯಗಳ ನಿರ್ವಹಣೆಯಲ್ಲಿ ಅನುಸರಿಸಲಾಗುತ್ತಿದೆ. ಈ ಕಛೇರಿಯ ಅಧೀನದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಛೇರಿ (AEE) ಕಾಮಗೆರೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಛೇರಿ (AEE) ಹಳ್ಳೀಪುರ (ಕೊಳ್ಳೇಗಾಲ ತಾ॥), ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಛೇರಿ (AEE) KCC, ಕೊಳ್ಳೇಗಾಲ ಹಾಗೂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಛೇರಿ (AEE), ಕಬಿನಿ ನಾಲಾ, ಕೊಳ್ಳೇಗಾಲ ಇಲ್ಲಿ ನಾಲ್ಕು ಶಾಖಾ ಕಛೇರಿಗಳಿವೆ. ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಮೈಸೂರು ಅವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಸಾರ್ವಜನಿಕ ಶಿಕ್ಷಣ ಇಲಾಖೆ

ಸರ್ಕಾರದ ಕಡ್ಡಾಯ ಪ್ರಾಥಮಿಕ ಶಿಕ್ಷಣ ಯೋಜನೆಯಡಿ ಜಿಲ್ಲೆಯ ಎಲ್ಲಾ ವರ್ಗದ ಮಕ್ಕಳಿಗೆ ಅಗತ್ಯವಾದ ಶಿಕ್ಷಣ ನೀಡುವುದು ಈ ಇಲಾಖೆಯ ಧ್ಯೇಯೋದ್ದೇಶಗಳಾಗಿವೆ. ಚಾಮರಾಜನಗರ ಜಿಲ್ಲೆಯು ಮೈಸೂರು ಜಿಲ್ಲೆಯಿಂದ ಪ್ರತ್ಯೇಕಗೊಂಡ ನಂತರ ಜಿಲ್ಲೆಯಲ್ಲಿ ಈ ಇಲಾಖೆಯು ೧೯೯೮ರಲ್ಲಿ ಅಸ್ತಿತ್ವಕ್ಕೆ ಬಂದಿತು. ಉಪನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಇವರ ನೆರವಿಗೆ ಶಿಕ್ಷಣಾಧಿಕಾರಿಗಳು, ವಿಷಯ ಪರಿವೀಕ್ಷಕರು, ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರು, ಪತ್ರಾಂಕಿತ ವ್ಯವಸ್ಥಾಪಕರು, ಅಧೀಕ್ಷಕರು ಸಹಾಯಕ ಸಾಂಖ್ಯಿಕ ಅಧಿಕಾರಿ, ಪ್ರಥಮ ದರ್ಜೆ ಸಹಾಯಕರು, ಶೀಘ್ರಲಿಪಿಗಾರರು, ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ೨೬ ಸಿಬ್ಬಂದಿ ವರ್ಗವಿದೆ. ಇವರ ಅಧೀನದಲ್ಲಿ ಐದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.

ಒಂದರಿಂದ ಹತ್ತನೇ ತರಗತಿಯವರೆಗಿನ ಶಾಲಾ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಶೈಕ್ಷಣಿಕ ಕಾರ್ಯಗಳ ಮೇಲ್ವಿಚಾರಣೆ, ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸುವುದು, ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಹಾಗೂ ಪಠ್ಯಪುಸ್ತಕ ಒದಗಿಸುವುದು, ಶಾಲೆಗಳ ಅಭಿವೃದ್ಧಿಗೆ ಅನುದಾನ ಹಂಚುವುದು, ಶಾಲಾ ಕಟ್ಟಡಗಳ ನಿರ್ಮಾಣ ಮತ್ತು ದುರಸ್ತಿಗಳ ಮೇಲ್ವಿಚಾರಣೆ ಮೊದಲಾದವು ಈ ಕಛೇರಿಯ ಕಾರ್ಯಚಟುವಟಿಕೆಗಳಾಗಿವೆ. ಉಪನಿರ್ದೇಶಕರು, ಸರ್ವಶಿಕ್ಷಾ ಅಭಿಯಾನ ಕಾರ್ಯಕ್ರಮದ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಯಾಗಿಯೂ ಕಾರ್ಯನಿರ್ವಹಿಸುವರು. ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ

ಚಾಮರಾಜನಗರದಲ್ಲಿ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಯು ಒಂದನೇ ಡಿಸೆಂಬರ್ ೧೯೯೭ ರಿಂದ ಅಸ್ತಿತ್ವಕ್ಕೆ ಬಂದಿದ್ದು, ಇದರ ಕಾರ್ಯವ್ಯಾಪ್ತಿ ಚಾಮರಾಜನಗರ ಜಿಲ್ಲಾ ವ್ಯಾಪ್ತಿಯನ್ನು ಹೊಂದಿದೆ. ಇದಕ್ಕೂ ಪೂರ್ವದಲ್ಲಿ ಮೈಸೂರಿನಲ್ಲಿ ೧೯೧೮ರಲ್ಲಿ ಸಹಕಾರ ಸಂಘಗಳ ಇಲಾಖೆ ಸಹಾಯಕ ರಿಜಿಸ್ಟ್ರಾರ್‌ರವರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ರಾಜ್ಯಗಳ ಪುನರ್‌ವಿಂಗಡಣೆ ಸಂದರ್ಭದಲ್ಲಿ (೧೯೫೬) ಒಂದು ಸಹಕಾರಿ ಸಂಘಗಳ ವಿಭಾಗೀಯ ಕಛೇರಿ, ಸಹಕಾರ ಸಂಘಗಳ ಡೆಪ್ಯೂಟಿ ರಿಜಿಸ್ಟ್ರಾರ್‌ರವರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಈ ಹುದ್ದೆಯು ೧೯೬೭ರಲ್ಲಿ ಸಹಕಾರ ಸಂಘಗಳ ಡೆಪ್ಯೂಟಿ ರಿಜಿಸ್ಟ್ರಾರ್ ಎಂದು ಉನ್ನತೀಕರಿಸಲ್ಪಟ್ಟಿದೆ. ಈ ಕಛೇರಿಯು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಹಾಗೂ ಸೌಹಾರ್ದ ಸಹಕಾರ ಕಾಯ್ದೆಯಡಿ ಸಹಕಾರ ಸಂಘಗಳ ನೋಂದಣಿ, ಅವುಗಳ ಬೈಲಾ ತಿದ್ದುಪಡಿ, ಸಹಕಾರ ಸಂಸ್ಥೆಗಳ ಶಾಸನಾತ್ಮಕ ಪರಿವೀಕ್ಷಣೆ ಹಾಗೂ ವಿಚಾರಣೆ, ಸಹಕಾರ ಸಂಸ್ಥೆಗಳಲ್ಲಿನ ಹಣ ದುರುಪಯೋಗ ಪ್ರಕರಣಗಳ ಮೇಲೆ ಸಿವಿಲ್ ಮತ್ತು ಕ್ರಿಮಿನಲ್ ಕ್ರಮ ಜರುಗಿಸುವುದು, ಅಲ್ಲದೆ ಸಹಕಾರ ಸಂಸ್ಥೆಗಳಲ್ಲಿ ಉದ್ಭವಿಸುವ ವ್ಯಾಜ್ಯಗಳ ವಿಚಾರಣೆ, ಕರ್ನಾಟಕ ಲೇವಾದೇವಿ ಮತ್ತು ಗಿರವಿ ಕಾಯ್ದೆಯಡಿ ಲೇವಾದೇವಿ/ಗಿರವಿ ಸಂಸ್ಥೆಗಳ ನೋಂದಣಿ, ಚಿಟ್ ಫಂಡ್ ಕಾಯ್ದೆಯಡಿಯಲ್ಲಿ ಸಂಸ್ಥೆಗಳು ಹಣ ಚೀಟಿ ನಡೆಸಲು ಅನುಮತಿ ನೀಡುವುದು, ಸಹಕಾರ ಸಂಸ್ಥೆಗಳಿಗೆ ಸರ್ಕಾರದ ವತಿಯಿಂದ ಸಾಲ, ಷೇರು ಮತ್ತು ಸಹಾಯಧನವನ್ನು ಒದಗಿಸುವುದು ಮೊದಲಾದ ಮುಖ್ಯ ಧ್ಯೇಯೋದ್ದೇಶಗಳು ಹಾಗೂ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿದೆ. ಸಹಕಾರ ಸಂಘಗಳ ಉಪ ನಿಬಂಧಕರಿಗೆ ಆಡಳಿತದಲ್ಲಿ ನೆರವಾಗಲು ಸಹಕಾರ ಅಭಿವೃದ್ಧಿ ಅಧಿಕಾರಿ, ಅಧೀಕ್ಷಕರು, ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು, ಸಹಕಾರ ಸಂಘಗಳ ನಿರೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ಮತ್ತಿತರ ಅಧಿಕಾರಿ

ಸಿಬ್ಬಂದಿ ವರ್ಗವಿದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ೧೯೫೯, ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು ೧೯೬೦, ಕರ್ನಾಟಕ ಸಹಕಾರ ಸೌಹಾರ್ದ ಕಾಯ್ದೆ ಹಾಗೂ ನಿಯಮಗಳು, ಕರ್ನಾಟಕ ಲೇವಾದೇವಿ, ಗಿರವಿ ಕಾಯ್ದೆ ಹಾಗೂ ನಿಯಮಾವಳಿಗಳು, ಚಿಟ್ ಫಂಡ್ ಕಾಯ್ದೆ ಹಾಗೂ ನಿಯಮಾವಳಿಗಳು ಮೊದಲಾದ ನಿಯಮ ಅಧಿನಿಯಮಗಳನ್ನು ತನ್ನ ದಿನನಿತ್ಯದ ಕಛೇರಿ ಕೆಲಸ ಕಾರ್ಯಗಳಲ್ಲಿ ಅನುಸರಿಸುತ್ತಿದೆ. ಸಹಕಾರ ಸಂಘಗಳನ್ನು ಬಲಪಡಿಸುವ ಸಲುವಾಗಿ ಕೆಳಕಂಡ ಯೋಜನೆಗಳ ಮೂಲಕ ಧನ ಸಹಾಯವನ್ನು ಒದಗಿಸಲಾಗುತ್ತಿದೆ. ಕೇಂದ್ರ ಪುರಸ್ಕೃತ ಯೋಜನೆಯಡಿ ಗಿರಿಜನರ ದೊಡ್ಡ ಪ್ರಮಾಣದ ವಿವಿದೋದ್ದೇಶ ಸಹಕಾರ ಸಂಘಗಳಿಗೆ ಷೇರು ಧನ ನೀಡುವುದು, ರಾಜ್ಯ ಯೋಜನೆಯಡಿ ಸಹಕಾರ ಸಂಘಗಳಲ್ಲಿ ಹಿಂದುಳಿದವರು ಅಲ್ಪಸಂಖ್ಯಾತರು, ಮಹಿಳೆಯರು, ದುರ್ಬಲ ವರ್ಗದವರು ಹಾಗೂ ಪರಿಶಿಷ್ಟ ಜಾತಿಯವರನ್ನು ಸದಸ್ಯರನ್ನಾಗಿ ನೋಂದಾಯಿಸಲು ಷೇರು ಸಹಾಯಧನ ನೀಡುವುದು, ಜಿಲ್ಲಾ ಪಂಚಾಯತ್ ಯೋಜನೆಯಡಿ ಸಹಕಾರ ಸಂಘಗಳ ದುಡಿಯುವ ಬಂಡವಾಳ ಹೆಚ್ಚಿಸಲು ಷೇರು ಹಣ, ವ್ಯಾಪಾರ ವ್ಯವಹಾರ ಕಟ್ಟಡ ನಿರ್ಮಾಣ ಮಾಡಲು ಸಾಲ ನೀಡುವುದು ಹಾಗೂ ತಾಲೂಕು ಪಂಚಾಯತ್ ಯೋಜನೆಯಡಿ 'ಪಿ' ಕಾರ್ಡ್ ಬ್ಯಾಂಕುಗಳಲ್ಲಿ ಪರಿಶಿಷ್ಟ ಜಾತಿ ಸದಸ್ಯರು ಪಡೆದ ಸಾಲದ ಮೇಲೆ ವಿಶೇಷ ಘಟಕ ಯೋಜನೆಯಡಿ ಆಸ್ತಿಗಳ ಸೃಷ್ಟಿಗಾಗಿ ಶೇ. ೬೦ರಷ್ಟು ಸಹಾಯಧನ ನೀಡುವುದು.

ಈ ಕಛೇರಿಯ ಅಧೀನದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಾಮರಾಜನಗರ ಉಪವಿಭಾಗ, ಚಾಮರಾಜನಗರ ಇವರು ಉಪವಿಭಾಗ ವ್ಯಾಪ್ತಿಯ ಆಡಳಿತಾಧಿಕಾರ ಹೊಂದಿದ್ದರೆ, ಸಹಕಾರ ಅಭಿವೃದ್ಧಿ ಅಧಿಕಾರಿ, ಗುಂಡ್ಲುಪೇಟೆ, ಸಹಕಾರ ಅಭಿವೃದ್ಧಿ ಅಧಿಕಾರಿ, ಯಳಂದೂರು ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ, ಕೊಳ್ಳೇಗಾಲ ರವರು ಕಾರ್ಯನಿರ್ವಹಿಸುತ್ತಿದ್ದು, ಆಯಾ ತಾಲೂಕಿನ ವ್ಯಾಪ್ತಿಯ ಆಡಳಿತಾಧಿಕಾರ ಹೊಂದಿರುತ್ತಾರೆ. ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ಇವರು ಈ ಕಛೇರಿಯ ತತ್‌ಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

## ಸಮಾಜ ಕಲ್ಯಾಣ ಇಲಾಖೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಕಲ್ಯಾಣಕ್ಕಾಗಿ ಈ ವರ್ಗದವರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿಯು ಚಾಮರಾಜನಗರದಲ್ಲಿ ೧೯೮೮ ರಿಂದ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಅವರ ನೆರವಿಗೆ ಕಛೇರಿಯ ವ್ಯವಸ್ಥಾಪಕರು, ಪ್ರಥಮ ಹಾಗೂ ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿ ಇದ್ದಾರೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ, ಈ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ವಿದ್ಯಾರ್ಥಿ ನಿಲಯಗಳು, ಮೊರಾರ್ಜಿ ದೇಸಾಯಿ ವಸತಿ ನಿಲಯಗಳ ನಿರ್ವಹಣೆ, ಪರಿಶಿಷ್ಟ ಜಾತಿ/ಪಂಗಡದವರು ದೌರ್ಜನ್ಯಕ್ಕೊಳಗಾದಲ್ಲಿ ಪರಿಹಾರ ಧನ ವಿತರಣೆ, ಅಂತರ್ ಜಾತಿ ವಿವಾಹವಾದವರಿಗೆ ಪ್ರೋತ್ಸಾಹಧನ ಮಂಜೂರಾತಿ, ಕಾನೂನು ಪದವೀಧರರಿಗೆ ಸಹಾಯಧನ, ಪರಿಶಿಷ್ಟ ಜಾತಿ ನಿರುದ್ಯೋಗಿ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಹೊಂದಲು ಭಾರೀ ವಾಹನ ಚಾಲನಾ ತರಬೇತಿ ಹಾಗೂ ಲಘುವಾಹನ ಚಾಲನಾ

ತರಬೇತಿ, ಪರಿಶಿಷ್ಟ ಜಾತಿ/ಪಂಗಡದ ನಿರುದ್ಯೋಗಿ ಅಭ್ಯರ್ಥಿಗಳನ್ನು ನರ್ಸಿಂಗ್ ತರಬೇತಿಗೆ ಆಯ್ಕೆ ಮಡುವುದು ಹಾಗೂ ವಿಶೇಷ ಘಟಕ ಯೋಜನೆಯಡಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ, ಕೈಗಾರಿಕೆ ಇಲಾಖೆಗಳ ಮುಖಾಂತರ ಪರಿಶಿಷ್ಟ ಜಾತಿಯವರಿಗೆ ಸೌಲಭ್ಯ ಒದಗಿಸುವುದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ರಸ್ತೆ, ಒಳಚರಂಡಿ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಒದಗಿಸುವುದು ಮೊದಲಾದ ಕಲ್ಯಾಣ ಕಾರ್ಯಕ್ರಮಗಳನ್ನು ಈ ಕಛೇರಿಯು ಕಾರ್ಯರೂಪಗೊಳಿಸುತ್ತದೆ. ಈ ಕಛೇರಿಯ ಅಧೀನದಲ್ಲಿ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳು, ಚಾಮರಾಜನಗರ; ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳು, ಕೊಳ್ಳೇಗಾಲ; ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳು, ಗುಂಡ್ಲುಪೇಟೆ ಹಾಗೂ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳು ಯಳಂದೂರುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆಯಾ ತಾಲೂಕಿನ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ ಮೊದಲಾದ ನಿಯಮ ಅಧಿನಿಯಮಗಳನ್ನು ಕಛೇರಿಯ ಕೆಲಸ ಕಾರ್ಯಗಳಲ್ಲಿ ಅನುಸರಿಸಲಾಗುತ್ತಿದೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ ಅವರು ಈ ಕಛೇರಿಯ ಮೇಲಧಿಕಾರಿಗಳಾಗಿದ್ದಾರೆ.

## ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸರ್ವಾಂಗೀಣ ಅಭಿವೃದ್ಧಿ ಉದ್ದೇಶದಿಂದ ಚಾಮರಾಜನಗರದಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯು ಮೇ ೨೨, ೧೯೯೮ ರಿಂದ ಕಾರ್ಯಾರಂಭಗೊಂಡಿತು. ಇದಕ್ಕೂ ಪೂರ್ವದಲ್ಲಿ ಈ ಕಛೇರಿಯು ೧೯೭೭-೭೮ ರಿಂದಲೂ ಮೈಸೂರಿನಲ್ಲಿ ಅಸ್ತಿತ್ವದಲ್ಲಿತ್ತು. ಜಿಲ್ಲಾ ಅಧಿಕಾರಿಗಳು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರಿಗೆ ಆಡಳಿತದಲ್ಲಿ ನೆರವಾಗಲು ಒಬ್ಬ ವ್ಯವಸ್ಥಾಪಕ, ಒಬ್ಬ ಪ್ರಥಮ ದರ್ಜೆ ಸಹಾಯಕರು, ಇಬ್ಬರು ದ್ವಿತೀಯ ದರ್ಜೆ ಸಹಾಯಕರು ಮೊದಲಾದ ಸಿಬ್ಬಂದಿ ವರ್ಗವಿದೆ. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ, ಸಾದಿಲ್ವಾರು ವೆಚ್ಚ ಕೈಪಿಡಿ, ಕರ್ನಾಟಕ ವೆಚ್ಚ ಕೈಪಿಡಿ, ಕರ್ನಾಟಕ ಬಜೆಟ್ ಕೈಪಿಡಿ ಇಲಾಖಾ ಸುತ್ತೋಲೆಗಳು, ಆದೇಶಗಳನ್ನು ತನ್ನ ಆಡಳಿತ ನಿರ್ವಹಣೆಯಲ್ಲಿ ಪಾಲಿಸುತ್ತಿದೆ.

ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿ ವೇತನ ನೀಡಿಕೆ, ಶಿಕ್ಷಣ ಶುಲ್ಕಗಳ ರಿಯಾಯಿತಿ, ಕಾನೂನು ಪದವೀಧರರಿಗೆ ತರಬೇತಿ, ಬೆರಳಚ್ಚು ಹಾಗೂ ಶೀಘ್ರಲಿಪಿಗಾರರಿಗೆ ಶಿಷ್ಯವೇತನ, ಆಶ್ರಮ ಶಾಲೆಗಳ ನಿರ್ವಹಣೆ, ಬೆಳ್ಳಿ ಬೆಳಕು ಮಂಜೂರಾತಿ, ಕೌಶಲ್ಯ ಯೋಜನೆ ಪ್ರೋತ್ಸಾಹ ಧನ ಮಂಜೂರಾತಿ ಮತ್ತು ಮೊರಾರ್ಜಿ ವಸತಿ ಶಾಲೆಗಳ ನಿರ್ವಹಣೆ ಹಾಗೂ ಅಲ್ಪಸಂಖ್ಯಾತರ ಇಲಾಖೆಯ ನರ್ಸಿಂಗ್ ಕೋರ್ಸು, ಕಲಿಕಾ ಬೋದನಾ ಕಾರ್ಯಕ್ರಮ, ೧೫ ಅಂಶಗಳ ಕಾರ್ಯಕ್ರಮ, ಶಾದಿ ಮಹಲ್, ಸಮುದಾಯಭವನ ಮಂಜೂರಾತಿ ಮತ್ತಿತರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸಲಾಗುತ್ತಿದೆ. ಜಿಲ್ಲೆಯ ಎಲ್ಲಾ ತಾಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು ಇಲಾಖಾ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಇವರ ಕಛೇರಿಯಲ್ಲಿ ಈ ಇಲಾಖೆಯ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಚಾಮರಾಜನಗರ ರವರು ಈ ಕಛೇರಿಯ ಮೇಲಧಿಕಾರಿಗಳಾಗಿದ್ದಾರೆ.

# ರಾಜ್ಯ ಸರ್ಕಾರದ ನಿಗಮ ಮತ್ತು ಮಂಡಳಿಗಳು

## ಡಾ॥ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಅತ್ಯಂತ ಹಿಂದುಳಿದ ಜನಾಂಗದವರಾಗಿದ್ದು, ಅವರ ಸರ್ವತೋಮುಖ ಬೆಳವಣಿಗೆಗೆ ಹಾಗೂ ಅವರ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಕರ್ನಾಟಕ ಸರ್ಕಾರದ ಕಂಪನಿ ಕಾಯ್ದೆ ೧೯೫೬ರ ಅಡಿಯಲ್ಲಿ ಮಾರ್ಚ್ ೨೦, ೧೯೭೫ರಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಯಿತು. ತದನಂತರ ಆಗಸ್ಟ್ ೧೬, ೨೦೦೫ ರಂದು ಡಾ॥ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಎಂದು ಮರು ನಾಮಕರಣ ಮಾಡಲಾಯಿತು. ಜಿಲ್ಲಾ ವ್ಯವಸ್ಥಾಪಕರು ಈ ನಿಗಮದ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಇವರಿಗೆ ಆಡಳಿತದಲ್ಲಿ ನೆರವಾಗಲು ಕಛೇರಿ ಅಧೀಕ್ಷಕರು, ತಾಲೂಕು ಅಭಿವೃದ್ಧಿ ಅಧಿಕಾರಿಗಳು, ಕಿರಿಯ ಸಹಾಯಕರು ಮತ್ತಿತರ ಸಿಬ್ಬಂದಿ ವರ್ಗವಿದೆ. ಈ ನಿಗಮವು ಕರ್ನಾಟಕ ಸರ್ಕಾರದ ಕಂಪನಿ ಕಾಯಿದೆ ೧೯೫೧ರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ನಿಗಮದ ಅಧಿಕೃತ ಷೇರು ಬಂಡವಾಳ ₹ ೧೫೦ ಕೋಟಿಗಳಾಗಿದ್ದು, ಇದರಲ್ಲಿ ರಾಜ್ಯ ಸರ್ಕಾರದ ಪಾಲು ಶೇ. ೫೧, ಕೇಂದ್ರ ಸರ್ಕಾರದ ಪಾಲು ಶೇ. ೪೯ ಆಗಿರುತ್ತದೆ. ೨೦೦೪-೦೫ನೇ ಸಾಲಿನಲ್ಲಿ ನಿಗಮವು ISO ೯೦೦೧-೨೦೦೦ ಅಂತರ ರಾಷ್ಟ್ರೀಯ ಗುಣಮಟ್ಟದ ಪ್ರಮಾಣ ಪತ್ರ ಪಡೆದಿದೆ. ಸ್ವಯಂ ಉದ್ಯೋಗ ಯೋಜನೆ, ಭೂ ಒಡೆತನ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ ಮತ್ತಿತರ ಕಾರ್ಯಕ್ರಮಗಳನ್ನು ಜಾರಿಗೊಳಿಸಿ, ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ, ಅವರ ಸರ್ವತೋಮುಖ ಬೆಳವಣಿಗೆಗೆ ಹಾಗೂ ಅವರ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಶ್ರಮಿಸುತ್ತಿದೆ. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಅವರು ಈ ನಿಗಮದ ಮೇಲಧಿಕಾರಿಗಳಾಗಿರುತ್ತಾರೆ.

## ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ

ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ಆಹಾರ ಪದಾರ್ಥಗಳ ಎತ್ತುವಳಿ, ಸಂಗ್ರಹಣೆ ಹಾಗೂ ವಿತರಣೆ ಮತ್ತಿತರ ಧ್ಯೇಯೋದ್ದೇಶಗಳು ಹಾಗೂ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿರುವ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ, ನಿಯಮಿತವು ನವೆಂಬರ್ ೧೯೭೩ ರಲ್ಲಿ ಆರಂಭಗೊಂಡಿತು. ಜಿಲ್ಲಾ ವ್ಯವಸ್ಥಾಪಕರು ನಿಗಮದ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಇವರಿಗೆ ನೆರವಾಗಲು ಸಹಾಯಕ ವ್ಯವಸ್ಥಾಪಕರು, ಕಛೇರಿ ವ್ಯವಸ್ಥಾಪಕರು, ಏಳು ಮಂದಿ ಹಿರಿಯ ಸಹಾಯಕರು (ಲೆಕ್ಕ), ೨೧ ಕಿರಿಯ ಸಹಾಯಕರು ಮತ್ತಿತರ ಅಧಿಕಾರಿ ಸಿಬ್ಬಂದಿ ವರ್ಗವಿದೆ. ಮಳಿಗೆ ನಿರ್ವಾಹಕರು ತಾಲೂಕು ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ತಾಲೂಕು ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ, ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

ಕುಶಲಕರ್ಮಿಗಳಿಗೆ ಉತ್ತೇಜನ ನೀಡುವುದು, ಗ್ರಾಮಾಂತರ ಪ್ರದೇಶದಲ್ಲಿ ನಿರುದ್ಯೋಗಿ ಯುವಕ ಯುವತಿಯರಿಗೆ, ಮಾಜಿ ಸೈನಿಕರಿಗೆ, ಅಂಗವಿಕಲರಿಗೆ, ಹಿಂದುಳಿದ ವರ್ಗದವರಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಅಲ್ಪ ಸಂಖ್ಯಾತರಿಗೆ ಗ್ರಾಮ ಕೈಗಾರಿಕೆಗಳನ್ನು ಸ್ಥಾಪಿಸುವುದರ ಮೂಲಕ ಉದ್ಯೋಗ ಕಲ್ಪಿಸಿ

ಕೊಡುವುದು. ಮತ್ತಿತರ ಉದ್ದೇಶಗಳೊಂದಿಗೆ ೧೯೮೮ರಲ್ಲಿ ಈ ಕಛೇರಿಯು ಆರಂಭಗೊಂಡಿತು. ಅಭಿವೃದ್ಧಿ ಅಧಿಕಾರಿಗಳು ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರಿಗೆ ನೆರವಾಗಲು ಒಬ್ಬ ತಾಂತ್ರಿಕ ಮೇಲ್ವಿಚಾರಕರು ಹಾಗೂ ಒಬ್ಬ ಪ್ರಥಮ ದರ್ಜೆ ಸಹಾಯಕರಿದ್ದಾರೆ. ಈ ಕಛೇರಿಯು ೧೯೫೭ರ ನಿಯಮದಡಿಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ನಿಯಮಾವಳಿ ಮತ್ತು ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ನಿಯಮಗಳ ಪ್ರಕಾರ ಕಾರ್ಯನಿರ್ವಹಿಸುತ್ತಿದೆ.

೧೯೯೭ ರಿಂದ ಗ್ರಾಮೀಣ ಉದ್ಯೋಗ ಸೃಷ್ಟಿ ಯೋಜನೆಯಡಿಯಲ್ಲಿ ಅಂಚು ಹಣವನ್ನು ಮಾರ್ಚ್ ೩೧, ೨೦೦೮ರವರೆಗೆ ನಿರ್ವಹಿಸುತ್ತಿದ್ದು, ಏಪ್ರಿಲ್–೨೦೦೮ ರಿಂದ ಪ್ರಧಾನಮಂತ್ರಿ ಉದ್ಯೋಗ ಭರವಸೆ ಯೋಜನೆ (ಪಿ.ಎಂ.ಇ.ಜಿ.ಪಿ) ಅನುಷ್ಠಾನಗೊಳಿಸಲಾಗಿದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಳಿಯು ಚಾಮರಾಜನಗರ ಜಿಲ್ಲೆಯಾದ್ಯಂತ ಕಡಿಮೆ ಆದಾಯ ವರ್ಗ(ಎಲ್.ಐ.ಜಿ)/ ಮಧ್ಯಮ ಆದಾಯ ವರ್ಗ(ಎಂ.ಐ.ಜಿ) ಹಾಗೂ ಹೆಚ್ಚು ಆದಾಯ ವರ್ಗ (ಹೆಚ್.ಐ.ಜಿ) ಆದಾಯವುಳ್ಳ ಜನರಿಗೆ ವಸತಿ ನಿವೇಶನಗಳನ್ನು ಪೂರೈಸಲು ಜಿಲ್ಲಾ, ತಾಲೂಕು ಹಾಗೂ ಹೋಬಳಿ ಮಟ್ಟಗಳಲ್ಲಿ ವಸತಿ ನಿವೇಶನಗಳ ಬಡಾವಣೆಯನ್ನು ಅಭಿವೃದ್ಧಿಪಡಿಸಿ, ಹಂಚಿಕೆ ಮಾಡುವ ಉದ್ದೇಶಗಳೊಂದಿಗೆ ೧೯೯೯ರಲ್ಲಿ ಈ ಕಛೇರಿ ಆರಂಭಗೊಂಡಿತ್ತು, ಇದು ವಸತಿ ಇಲಾಖೆಗೆ ಸೇರಿದೆ. ಸಹಾಯಕ ಕಾರ್ಯಪಾಲಕ ಅಭಿಯಂತರರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿಯ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರಿಗೆ ದಿನನಿತ್ಯದ ಕಛೇರಿ ಕೆಲಸ ಕಾರ್ಯಗಳಲ್ಲಿ ನೆರವಾಗಲು ಓರ್ವ ಸಹಾಯಕ ಅಭಿಯಂತರರು, ಓರ್ವ ಅಧೀಕ್ಷಕರು, ಇಬ್ಬರು ಪ್ರಥಮ ದರ್ಜೆ ಸಹಾಯಕರು, ಓರ್ವ ಎರಡನೇ ದರ್ಜೆ ಸಹಾಯಕರು ಹಾಗೂ ಮೂವರು 'ಡಿ'ದರ್ಜೆ ನೌಕರರಿದ್ದರು. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು (ಕೆ.ಸಿ.ಎಸ್.ಆರ್), ಕರ್ನಾಟಕ ಆರ್ಥಿಕ ಸಂಹಿತೆ, ಸಾಧಿಲ್ವಾರು ವೆಚ್ಚಗಳ ಕೈಪಿಡಿ, ಕೆ.ಹೆಚ್.ಬಿ ಆಕ್ಟ್ ೧೯೬೨ ಮತ್ತಿತರ ನಿಯಮ ಹಾಗೂ ಅಧಿನಿಯಮಗಳಡಿ ತನ್ನ ದಿನನಿತ್ಯದ ಕೆಲಸಕಾರ್ಯಗಳನ್ನು ಅನುಸರಿಸುತ್ತಿದೆ. ಚಾಮರಾಜನಗರ ಜಿಲ್ಲಾ ಕ್ರೀಡಾಂಗಣದ ಬಳಿಯಲ್ಲಿ ೧೫ ಎಕರೆ ೧೧ ಗುಂಟೆ ವಿಸ್ತೀರ್ಣದಲ್ಲಿ ವಸತಿ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಅಲ್ಲದೆ ಗುಂಡ್ಲುಪೇಟೆ ತಾಲ್ಲೂಕಿನ ಪಂಜನಹಳ್ಳಿ ಗ್ರಾಮದಲ್ಲಿ ೧೦ ಎಕರೆ ವಿಸ್ತೀರ್ಣದಲ್ಲಿ ವಸತಿ ನಿವೇಶನಗಳ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ, ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಮೈಸೂರುರವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಕರ್ನಾಟಕ ಭೂ ಸೇನಾ ನಿಗಮ ನಿಯಮಿತ

ಗ್ರಾಮೀಣಾಭಿವೃದ್ಧಿ ಹಾಗೂ ಉದ್ಯೋಗಾಧಾರಿತ ಕಾಮಗಾರಿಗಳನ್ನು ನಿರ್ವಹಿಸುವ ಗ್ರಾಮೀಣ ಜನತೆಯ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸುವುದು, ಗ್ರಾಮೀಣಾಭಿವೃದ್ಧಿ ಕಾಮಗಾರಿಗಳಲ್ಲಿ ಮಧ್ಯವರ್ತಿಗಳು ಹಾಗೂ ಗುತ್ತಿಗೆದಾರರನ್ನು ದೂರವಿಟ್ಟು ಯೋಜನೆಗಾಗಿ ಮೀಸಲಿಟ್ಟ ಹಣದ ಪೂರ್ಣ ಫಲವನ್ನು ಗ್ರಾಮೀಣ ಜನತೆಗೆ ತಲುಪಿಸುವುದು. ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ವಿವಿಧ ಇಲಾಖೆಗಳ, ನಿಗಮ, ಮಂಡಳಿಗಳ ಹಾಗೂ ಸ್ಥಳೀಯ ಸ್ವಾಯತ್ತ ಸಂಸ್ಥೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮತ್ತಿತರ ಧ್ಯೇಯೋದ್ದೇಶ ಹಾಗೂ ಕಾರ್ಯ ಚಟುವಟಿಕೆಗಳೊಂದಿಗೆ

ನಿಗಮದ ಚಾಮರಾಜನಗರ ವಿಭಾಗ ಕಚೇರಿಯು ೨೦೦೩ರಲ್ಲಿ ಆರಂಭಗೊಂಡಿತು. ಉಪನಿರ್ದೇಶಕರು, ಈ ಕಚೇರಿಯ ಮುಖ್ಯಾಧಿಕಾರಿಯಾಗಿದ್ದು, ಚಾಮರಾಜನಗರ ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಇದು ಆರ್.ಡಿ.ಪಿ.ಆರ್. ಇಲಾಖೆಯ ಅಧೀನಕ್ಕೆ ಒಳಪಟ್ಟಿದೆ. ಇವರಿಗೆ ನೆರವಾಗಲು ಪ್ರಥಮ ದರ್ಜೆ ಗುಮಾಸ್ತ, ದ್ವಿತೀಯ ದರ್ಜೆ ಗುಮಾಸ್ತ ಮತ್ತಿತರ ಸಿಬ್ಬಂದಿ ವರ್ಗವಿದೆ.

ಜಿಲ್ಲಾ ಪಂಚಾಯ್ತಿ ಕಾಮಗಾರಿಗಳು, ಸುವರ್ಣ ಗ್ರಾಮೋದಯ ಯೋಜನೆಗಳು, ಸಂಸದರ ಪ್ರದೇಶಾಭಿವೃದ್ಧಿ ಯೋಜನೆಗಳು, ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಂಗನವಾಡಿ ಕಟ್ಟಡಗಳು, ಆರೋಗ್ಯ ಇಲಾಖೆ, ಪಶುವೈದ್ಯ ಇಲಾಖೆ, ಹಿಂದುಳಿದ ವರ್ಗಗಳ (ಬಿ.ಸಿ.ಎಂ) ಇಲಾಖೆ ಮತ್ತಿತರ ಇಲಾಖೆಗಳ ಕಾಮಗಾರಿಗಳನ್ನು ಕೈಗೊಳ್ಳುವ ಯೋಜನೆಗಳು ಹಾಗೂ ಅಭಿವೃದ್ಧಿ ಕಾರ್ಯದಲ್ಲಿ ಈ ನಿಗಮ ತೊಡಗಿಸಿಕೊಂಡಿದೆ. ಕೆ.ಎಲ್.ಎ.ಸಿ.ಸಿ. ಮತ್ತು ಆರ್. ನಿಯಮಗಳನ್ನು ತನ್ನ ಕಚೇರಿ ಕೆಲಸಕಾರ್ಯಗಳಲ್ಲಿ ಅನುಸರಿಸುತ್ತದೆ.

ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ ಹಾಗೂ ಯಳಂದೂರು ತಾಲೂಕುಗಳಲ್ಲಿರುವ ಈ ನಿಗಮದ ಉಪವಿಭಾಗದ ಕಚೇರಿಗಳು ಕರ್ನಾಟಕ ಭೂಸೇನಾ ನಿಗಮ ನಿಯಮಿತ ಚಾಮರಾಜನಗರ ವಿಭಾಗ ಕಚೇರಿಯ ವ್ಯಾಪ್ತಿಗೆ ಒಳಪಡುತ್ತವೆ. ಜಂಟಿ ನಿರ್ದೇಶಕರು, ಮೈಸೂರು ವಲಯ, ಮೈಸೂರು ಈ ನಿಗಮದ ಮೇಲಧಿಕಾರಿಗಳಾಗಿರುತ್ತಾರೆ.

## ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳ ಮತ್ತು ಸೇವಾ ಕ್ಷೇತ್ರ (ವಾಣಿಜ್ಯ ಮಾತ್ರ) ಸ್ಥಾಪನೆಗೆ ಮತ್ತು ಈಗಾಗಲೇ ಅಸ್ತಿತ್ವದಲ್ಲಿರುವ ಕೈಗಾರಿಕೆಗಳ ಅಭಿವೃದ್ಧಿ ಮತ್ತು ವಿಸ್ತರಣೆಗೆ ಆರ್ಥಿಕ ನೆರವು ನೀಡುವ ಉದ್ದೇಶಗಳೊಂದಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಚಾಮರಾಜನಗರದಲ್ಲಿ ಜುಲೈ ೧೯೭೨ರಲ್ಲಿ ಅಸ್ತಿತ್ವಕ್ಕೆ ಬಂದಿತು. ಶಾಖಾ ವ್ಯವಸ್ಥಾಪಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರಿಗೆ ನೆರವಾಗಲು ಮೂವರು ವ್ಯವಸ್ಥಾಪಕರು (ಹಣಕಾಸು ಮತ್ತು ಲೆಕ್ಕ), ಒಬ್ಬ ವ್ಯವಸ್ಥಾಪಕ (ತಾಂತ್ರಿಕ), ಒಬ್ಬ ವ್ಯವಸ್ಥಾಪಕ (ಕಾನೂನು), ಒಬ್ಬ ವ್ಯವಸ್ಥಾಪಕರು (ಆರ್ಥಿಕ ಮತ್ತು ಯೋಜನೆ), ಒಬ್ಬ ಸಹಾಯಕ ವ್ಯವಸ್ಥಾಪಕ, ಮತ್ತಿತರ ಸಿಬ್ಬಂದಿ ವರ್ಗವಿದೆ. ರಾಜ್ಯ ಹಣಕಾಸು ಸಂಸ್ಥೆಗಳ ಕಾಯ್ದೆ ೧೯೫೧ರ ಅಧಿನಿಯಮದಂತೆ ಸಂಸ್ಥೆಯು ಸಾಲ ಮಂಜೂರಾತಿ, ವಿತರಣೆ, ವಸೂಲಾತಿ ಮತ್ತಿತರ ಚಟುವಟಿಕೆಗಳನ್ನು ನಿರ್ವಹಿಸುತ್ತಿದೆ. ಇದಲ್ಲದೆ ಸಂಸ್ಥೆಯ ಕಾರ್ಯನಿರ್ವಾಹಕ ಮಂಡಳಿಯ ಕಾಲಾನುಕಾಲದ ತೀರ್ಮಾನದಂತೆ ಕಾರ್ಯನಿರ್ವಹಿಸುತ್ತದೆ. ಈ ಸಂಸ್ಥೆಯು ಪ್ರಸ್ತುತ ಗ್ರಾನೈಟ್ ಉದ್ಯಮ, ವಾಣಿಜ್ಯ ಸಂಕೀರ್ಣ, ಹೋಟೆಲ್ ಉದ್ಯಮ, ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಚಟುವಟಿಕೆಗಳು, ಅಕ್ಕಿ ಗಿರಣಿಗಳು, ಸಮುದಾಯ ಭವನಗಳು ಮುಂತಾದ ಅಭಿವೃದ್ಧಿ ಚಟುವಟಿಕೆಗಳಿಗೆ ಹಣಕಾಸು ನೆರವು ನೀಡುತ್ತಿದೆ. ಉಪ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ವಲಯ ಕಛೇರಿ, ಹೋಟೆಲ್ ಗೋವರ್ಧನ್ ಕಾಂಪ್ಲೆಕ್ಸ್, ಮೈಸೂರು ರವರು ಈ ಕಛೇರಿಯ ಮೇಲಾಧಿಕಾರಿಗಳಾಗಿರುತ್ತಾರೆ.

## ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

ತನ್ನ ಗ್ರಾಹಕರಿಗೆ ಸ್ಪರ್ಧಾತ್ಮಕ ದರದಲ್ಲಿ ವಿಶ್ವಾಸನೀಯ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವ ಉದ್ದೇಶದೊಂದಿಗೆ ಜೂನ್ ೧, ೨೦೦೫ರಲ್ಲಿ ಆರಂಭಗೊಂಡಿತು. ಇದಕ್ಕೂ ಮೊದಲು ವಿದ್ಯುಚ್ಛಕ್ತಿಯ ಸಾಗಣೆ ಮತ್ತು ವಿತರಣೆಯ ವ್ಯವಸ್ಥೆಯನ್ನು ಮಾಡುವ ಉದ್ದೇಶಗಳೊಂದಿಗೆ ೧೯೫೭ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಅಸ್ತಿತ್ವಕ್ಕೆ ಬಂದಿತು. ತರುವಾಯ ೧೯೮೬ರಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವಾಗಿ ಮಾರ್ಪಟ್ಟಿತು. ಗ್ರಾಮೀಣ ವಿದ್ಯುದ್ದೀಕರಣ ಕೈಗಾರಿಕೆಗಳಿಗೆ ವಿದ್ಯುತ್ ಪೂರೈಕೆ ಮುಂತಾದ ಚಟುವಟಿಕೆಗಳಲ್ಲಿ ಈ ನಿಗಮವು ತೊಡಗಿದೆ. ೧೯೯೯ನೇ ಸಾಲಿನಲ್ಲಿ ಕರ್ನಾಟಕ ರಾಜ್ಯವು ವಿದ್ಯುತ್ ಕ್ಷೇತ್ರದಲ್ಲಿ ಮಹತ್ತರ ಸುಧಾರಣೆಯನ್ನು ಕೈಗೆತ್ತಿಕೊಂಡಿತು. ಪ್ರತಿಫಲವಾಗಿ ಪ್ರಥಮವಾಗಿ ವಿದ್ಯುಚ್ಛಕ್ತಿ ಮಂಡಳಿಯನ್ನು ವಿಭಜಿಸಿ ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತ ಮತ್ತು ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ (VVNL) ಗಳನ್ನು ಸ್ಥಾಪಿಸಲಾಯಿತು. ಆನಂತರ ೧೯೯೯ರ ನವೆಂಬರ್ ತಿಂಗಳಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (K.E.R.C.) ವನ್ನು ರಚಿಸಲಾಯಿತು. ಸುಧಾರಣೆ ಪ್ರಕ್ರಿಯೆಯು ಮುಂದಿನ ಹಂತದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ನಿರ್ವಹಿಸುತ್ತಿದ್ದ ಪ್ರಸರಣ ಮತ್ತು ನಿರ್ವಹಣೆ ವ್ಯವಹಾರವನ್ನು ಜೂನ್ ೨೦೦೨ರಲ್ಲಿ ವಿಂಗಡಿಸಿ, ರಾಜ್ಯದಲ್ಲಿ ನಾಲ್ಕು ಹೊಸ ವಿದ್ಯುತ್ ವಿತರಣಾ ಕಂಪನಿಗಳನ್ನು (ಬೆಸ್ಕಾಂ, ಮೆಸ್ಕಾಂ, ಗೆಸ್ಕಾಂ ಹಾಗೂ ಹೆಸ್ಕಾಂ) ರಚಿಸಲಾಯಿತು. ನಂತರ ಮತ್ತೆ ದಿನಾಂಕ: ೧-೪-೨೦೦೫ರಲ್ಲಿ ಮೆಸ್ಕಾಂ ಅನ್ನು ವಿಭಜಿಸಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚೆಸ್ಕಾಂ) ಎಂಬ ಹೊಸ ಕಂಪನಿಯನ್ನು ಸೃಷ್ಟಿಸಿ, ಅದರ ವ್ಯಾಪ್ತಿಗೆ ಮಂಡ್ಯ, ಮೈಸೂರು, ಮಡಿಕೇರಿ,ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳನ್ನು ಸೇರಿಸಲಾಯಿತು. ಈ ಜಿಲ್ಲೆಯಲ್ಲಿ ಬರುವ (ಚಾಮರಾಜನಗರ ಹಾಗೂ ಕೊಳ್ಳೇಗಾಲ) ವಿಭಾಗೀಯ ಕಛೇರಿಗಳಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ವಿದ್ಯುತ್ ರವರುಗಳಿದ್ದು, ಆಯಾ ವಿಭಾಗಗಳ ಮುಖ್ಯಸ್ಥರುಗಳಾಗಿರುತ್ತಾರೆ. ಚಾಮರಾಜನಗರ ವಿಭಾಗವು ಚಾಮರಾಜನಗರ ಹಾಗೂ ಗುಂಡ್ಲುಪೇಟೆ ತಾಲೂಕುಗಳನ್ನು ತನ್ನ ವ್ಯಾಪ್ತಿಯಲ್ಲಿ ಹೊಂದಿದ್ದರೆ, ಕೊಳ್ಳೇಗಾಲ ವಿಭಾಗ ಕೊಳ್ಳೇಗಾಲ ಹಾಗೂ ಯಳಂದೂರು ತಾಲೂಕುಗಳನ್ನು ತನ್ನ ವ್ಯಾಪ್ತಿಯಲ್ಲಿ ಹೊಂದಿರುತ್ತದೆ. ತನ್ನ ಕಾರ್ಯನಿರ್ವಹಣೆಯಲ್ಲಿ ಕಂಪನಿ ಕಾಯಿದೆ-೧೯೫೬, ಬೋನಸ್ ಆಕ್ಟ್, ಭಾರತೀಯ ವಿದ್ಯುಚ್ಛಕ್ತಿ ಕಾಯಿದೆ ಮತ್ತಿತರ ನಿಯಮಗಳನ್ನು ಅನುಸರಿಸುತ್ತಿದೆ. ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆ ಹಾಗೂ ರಾಜ್ಯ ಸರ್ಕಾರದ ಗಂಗಾಕಲ್ಯಾಣ ಯೋಜನೆ ಮತ್ತಿತರ ಯೋಜನೆಗಳನ್ನು ಹಮ್ಮಿಕೊಂಡಿದೆ. ಅಧೀಕ್ಷಕ ಇಂಜಿನಿಯರ್ (ವಿದ್ಯುತ್) ಸಿ.ಇ.ಎಸ್.ಸಿ., ಮೈಸೂರು ವಿಭಾಗ, ಮೈಸೂರು ರವರು ಈ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ.

## ಮೈಸೂರು-ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಮೈಸೂರು.

ವಿಶ್ವಬ್ಯಾಂಕಿನ ನೆರವಿನೊಡನೆ ಪ್ರಾರಂಭಿಸಲ್ಪಟ್ಟ ಕರ್ನಾಟಕ ಹೈನು ಅಭಿವೃದ್ಧಿ ಯೋಜನೆಯಡಿಯಲ್ಲಿ ಮೈಸೂರು ಜಿಲ್ಲೆ ಮತ್ತು ಮಂಡ್ಯ ಜಿಲ್ಲೆಯ ಐದು ತಾಲೂಕುಗಳನ್ನೊಳಗೊಂಡ ಮೈಸೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ದಿ. ೨೩-೧೧-೧೯೭೬ರಲ್ಲಿ ನೊಂದಾಯಿಸಲ್ಪಟ್ಟಿತು. ಗ್ರಾಮೀಣ ಜನರು ಕೃಷಿಯ ಜೊತೆಗೆ ಹೈನುಗಾರಿಕೆಯಲ್ಲಿ ಪ್ರಮುಖ ಉಪವೃತ್ತಿಯನ್ನಾಗಿ ರೂಪಿಸಿಕೊಳ್ಳುವಂತೆ ಮಾಡಿ ಅವರ ಸಾಮಾಜಿಕ ಮತ್ತು ಆರ್ಥಿಕ ಮಟ್ಟವನ್ನು ಉತ್ತಮ ಪಡಿಸುವ ಧ್ಯೇಯೋದ್ದೇಶಗಳೊಂದಿಗೆ ಆಯ್ದ ಹಳ್ಳಿಗಳಲ್ಲಿ 'ಅಮುಲ್' ಮಾದರಿಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಪ್ರಾರಂಭಿಸುವ ಕಾರ್ಯ

ಆರಂಭವಾಯಿತು. ಮತ್ತೆ ಸರ್ಕಾರದ ಆದೇಶದಂತೆ ಒಕ್ಕೂಟವನ್ನು ವಿಭಜಿಸಿ ದಿ ೦೧-೦೪-೧೯೮೪ರಂದು ಮಂಡ್ಯ ಜಿಲ್ಲೆಯ ಸಂಘಗಳನ್ನು ಬಿಟ್ಟು ಮೈಸೂರು ಚಾಮರಾಜನಗರ ಜಿಲ್ಲೆಗೆ ಸೀಮಿತವಾದಂತೆ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಅಸ್ತಿತ್ವಕ್ಕೆ ಬಂದು ಕಾರ್ಯನಿರ್ವಹಿಸುತ್ತಿದೆ.

ಗ್ರಾಮೀಣ ಪ್ರದೇಶದ ಉತ್ಪಾದಕರು ಪೂರೈಸುವ ಹಾಲಿಗೆ ನಿಯಮಿತವಾಗಿ ಯೋಗ್ಯದರ ನೀಡಿ ವರ್ಷ ಪೂರ್ತಿ ಮಾರುಕಟ್ಟೆ ಒದಗಿಸುವುದು; ಗ್ರಾಮೀಣ ಪ್ರದೇಶದಿಂದ ಸಂಗ್ರಹಿಸಿದ ಹಾಲನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಿ, ಶುದ್ಧಹಾಲನ್ನು ಪಾಲಿಥೀನ್ ಚೀಲಗಳಲ್ಲಿ ತುಂಬಿ ಬೆಳಗ್ಗೆ ಮತ್ತು ಸಂಜೆ ಎರಡು ಸರದಿಗಳಲ್ಲಿ ನಿಗದಿತ ಸಮಯಕ್ಕೆ ಸರಿಯಾಗಿ ಗ್ರಾಹಕರಿಗೆ ತಲುಪುವಂತೆ ವ್ಯವಸ್ಥೆ ಮಾಡುವುದು; ತುರ್ತು ಕರೆ ಮಾರ್ಗಗಳ ಮೂಲಕ ಹಾಲು ಉತ್ಪಾದಕರ ರಾಸುಗಳಿಗೆ ಪಶು ವೈದ್ಯಕೀಯ ಸೌಲಭ್ಯ ಒದಗಿಸುವುದು ಮತ್ತು ಸಂಘಗಳ ಸಿಬ್ಬಂದಿಯ ಮೂಲಕ ರಾಸುಗಳಿಗೆ ಪ್ರಥಮ ಚಿಕಿತ್ಸೆಯ ಸೌಲಭ್ಯ ಒದಗಿಸುವುದು; ರಾಸುಗಳ ತಳಿ ಅಭಿವೃದ್ಧಿಗೊಳಿಸುವುದಕ್ಕಾಗಿ ಕೃತಕ ಗರ್ಭಧಾರಣಾ ಸೌಲಭ್ಯ ಕಲ್ಪಿಸಿಕೊಡುವುದು; ಸಂಘಗಳ ಸದಸ್ಯರು ಹಸಿರು ಮೇವು ಅಭಿವೃದ್ಧಿ ಪಡಿಸುವುದಕ್ಕಾಗಿ ಮೇವಿನಬೀಜಗಳು, ಗೆಡ್ಡೆಗಳು ಮತ್ತು ಅಗತ್ಯ ತಾಂತ್ರಿಕ ತಿಳುವಳಿಕೆ ನೀಡಲು ಕೃಷಿ ತಜ್ಞರ ನೆರವು ಒದಗಿಸುವುದು ಹಾಗೂ ಅಧಿಕ ಹಾಲಿನ ಉತ್ಪಾದನೆಗಾಗಿ ಸಮತೋಲನ ಪಶು ಆಹಾರವನ್ನು ಉತ್ಪಾದಕರಿಗೆ ಪೂರೈಸುವುದು; ಸಂಘಗಳ ಸಾಂಸ್ಥಿಕ ಬಲವರ್ಧನೆಗಾಗಿ ಸಹಕಾರ ಅಭಿವೃದ್ಧಿ ಕಾರ್ಯಕ್ರಮಗಳಡಿಯಲ್ಲಿ ಮಹಿಳಾ ಶಿಕ್ಷಣ ಶಿಬಿರ, ಸದಸ್ಯರ ಶಿಕ್ಷಣ ಶಿಬಿರಗಳನ್ನು ಏರ್ಪಡಿಸುವುದು ಮತ್ತಿತರ ಪ್ರಮುಖ ಕಾರ್ಯ ಚಟುವಟಿಕೆಗಳಲ್ಲಿ ಒಕ್ಕೂಟವು ನಿರತವಾಗಿದೆ.

ಚಾಮರಾಜನಗರ ಜಿಲ್ಲೆಯ ಹಾಲು ಉತ್ಪಾದಕರ ಸಂಘಗಳಲ್ಲಿ ಒಟ್ಟು ೭೮,೧೭೧ ಸದಸ್ಯರಗಳಿದ್ದು, ಇವರಲ್ಲಿ ೨೦,೪೧೯ ಮಂದಿ ಮಹಿಳೆಯರು, ೧೧,೨೧೫ ಮಂದಿ ಪರಿಶಿಷ್ಟ ಜಾತಿಯವರು, ೧೭೨೫ ಮಂದಿ ಪರಿಶಿಷ್ಟ ಪಂಗಡದವರು ೩೨,೧೬೬ ಮಂದಿ ಸಣ್ಣ ರೈತರು, ೧೮,೯೮ ಮಂದಿ ಅತಿ ಸಣ್ಣ ರೈತರು, ೧೫,೩೮೪ ಮಂದಿ ಭೂ ರಹಿತ ಕಾರ್ಮಿಕರು ಹಾಗೂ ೧೧,೭೨೩ ಮಂದಿ ಇತರರು ಸೇರಿದ್ದಾರೆ.

## ಮುಖ್ಯ ವ್ಯಸ್ಥಾಪಕರು (ಕೈವ) ವಲಯ-೩ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ಮೈಸೂರು

ಜಿಲ್ಲಾ ವ್ಯಾಪ್ತಿಗೊಳಪಡುವ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಸೂಕ್ತ ಜಮೀನು ಪಡೆದು ಕೈಗಾರಿಕಾ ವಸಾಹತು ಸ್ಥಾಪಿಸುವುದು ಹಾಗೂ ಮೂಲಭೂತ ಸೌಲಭ್ಯ ಕಲ್ಪಿಸಿ ವಿವಿಧ ಅಳತೆಯ ನಿವೇಶನಗಳನ್ನು ಅಭಿವೃದ್ಧಿಪಡಿಸಿ, ಅರ್ಹ ಕೈಗಾರಿಕೋದ್ಯಮಿಗಳಿಗೆ ಹಂಚಿಕೆ ಮಾಡುವುದು ಹಾಗೂ ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾ ಸಾಮಗ್ರಿಗಳನ್ನು ಒದಗಿಸುವುದು ಮತ್ತಿತರ ಉದ್ದೇಶಗಳೊಂದಿಗೆ ಮುಖ್ಯ ವ್ಯವಸ್ಥಾಪಕರು (ಕೈವ) ವಲಯ-೨ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಮೈಸೂರು ಈ ಕಛೇರಿಯು ೧೯೬೩ರಲ್ಲಿ ಪ್ರಾರಂಭಗೊಂಡಿತು. ಮುಖ್ಯ ವ್ಯವಸ್ಥಾಪಕರು (ಕೈವ) ಈ ಕಛೇರಿಯ ಮುಖ್ಯಸ್ಥರಾಗಿದ್ದು, ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ ಮೊದಲಾದ ಒಂಭತ್ತು ಜಿಲ್ಲೆಗಳ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಈ ಕಛೇರಿಯ ಅಧೀನದಲ್ಲಿ ಉಪ ಮುಖ್ಯ ವ್ಯವಸ್ಥಾಪಕರ ಕಛೇರಿಯು (ಕೈವ) ಒಳಪಟ್ಟಿದ್ದು, ಈ ಕಛೇರಿಯ ವ್ಯಾಪ್ತಿಯಲ್ಲಿ ಮಂಡ್ಯ, ಮೈಸೂರು, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳು ಸೇರುತ್ತವೆ.

ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಿ ವಿವಿಧ ಅಳತೆಯ ಮಳಿಗೆ/ನಿವೇಶನಗಳನ್ನು ಕೈಗಾರಿಕೋದ್ಯಮಿಗಳಿಗೆ ಹಂಚಿಕೆ ಮಾಡುವುದು, ವಿಶೇಷವಾಗಿ ಹಿಂದುಳಿದ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳ ನಿರ್ಮಾಣ ಹಾಗೂ ಉಪಯೋಗ, ಕಚ್ಚಾ ಸಾಮಗ್ರಿಗಳ ಸಂಗ್ರಹಣೆ, ಮಾರಾಟ, ತಾಂತ್ರಿಕ ಸಲಹೆ ಮತ್ತಿತರ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿತ್ತು. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದಲ್ಲಿ ೭.೪೮ ಎಕರೆ ಜಮೀನಿನಲ್ಲಿ ವಿವಿಧ ಮಾದರಿಯ ಒಟ್ಟು ೨೪ ಮಳಿಗೆಗಳು ಹಾಗೂ ೧೬ ನಿವೇಶನಗಳನ್ನು ಅಭಿವೃದ್ಧಿಪಡಿಸಿ ಕೈಗಾರಿಕೊದ್ಯಮಿಗಳಿಗೆ ಹಂಚಿಕೆ ಮಾಡಲಾಗಿದೆ. ಚಾಮರಾಜನಗರದಲ್ಲಿ ಒಂಭತ್ತು ಎಕರೆ ಜಮೀನಿನಲ್ಲಿ ಹಾಗೂ ಗುಂಡ್ಲುಪೇಟೆ ತಾಲೂಕಿನ ವೀರನಪುರದಲ್ಲಿ ೧೨ ಎಕರೆ ಜಮೀನಿನಲ್ಲಿ ಹೊಸದಾಗಿ ಕೈಗಾರಿಕಾ ವಸಾಹತುಗಳ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದ್ದು, ನಿವೇಶನಗಳನ್ನಾಗಿ ಪರಿವರ್ತಿಸಿ ನಂತರ ಕೈಗಾರಿಕೋದ್ಯಮಿಗಳಿಗೆ ಹಂಚಿಕೆ ಮಾಡಲಾಗುವುದು. ಪ್ರಧಾನ ವ್ಯವಸ್ಥಾಪಕರು (ಕೈ.ವ) ವಲಯ–೨, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ, ರಾಜಾಜಿನಗರ, ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಗಳಾಗಿದ್ದಾರೆ.

## ಕೇಂದ್ರ ಸರ್ಕಾರದ ಕಛೇರಿಗಳು

### ಅಂಚೆ ಇಲಾಖೆ

ಜಿಲ್ಲೆಯ ಜನತೆಗೆ ಅಂಚೆ ಸೇವೆ ಒದಗಿಸುವ ಉದ್ದೇಶದಿಂದ, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿದ ಉಪ–ಅಂಚೆ ಮಾಸ್ತರರ (Sub-Post Master) ಕಛೇರಿಯು ಜಿಲ್ಲೆಯಲ್ಲಿ ಒಂದನೇ ಸೆಪ್ಟೆಂಬರ್ ೧೯೭೯ರಲ್ಲಿ ಆರಂಭಗೊಂಡಿತು. ನಂತರ ೧೧ನೇ ಫೆಬ್ರವರಿ ೧೯೮೦ರಲ್ಲಿ ಮುಖ್ಯ ಅಂಚೆ ಕಛೇರಿಯಾಗಿ ಮೇಲ್ದರ್ಜೆಗೇರಿಸಲಾಯಿತು. ಮತ್ತೆ ಒಂದನೇ ಏಪ್ರಿಲ್ ೧೯೮೬ರಲ್ಲಿ ಎಲ್ ಎಸ್ ಜಿ ಸಬ್–ಪೋಸ್ಟ್ ಆಫೀಸ್ ಆಗಿ ಕೆಳದರ್ಜೆಗೆ ಇಳಿಸಲಾಯಿತು. ಮತ್ತೆ ೧೧ನೇ ಮಾರ್ಚಿ ೨೦೦೨ರಲ್ಲಿ ಮುಖ್ಯ ಅಂಚೆ ಕಛೇರಿಯಾಗಿ (H.S.G ದರ್ಜೆ–೧೧) ಮೇಲ್ದರ್ಜೆಗೆ ಉನ್ನತೀಕರಿಸಲಾಯಿತು. ಪ್ರಸ್ತುತ ಚಾಮರಾಜನಗರದಲ್ಲಿ ಮುಖ್ಯ ಡಾಕ್‌ಘರ್ ಈ ಅಂಚೆ ಕಛೇರಿಯು ಕಾರ್ಯನಿರ್ವಹಿಸುತ್ತಿದೆ. ಉಪ–ಅಂಚೆ ಮಾಸ್ಟರ್ ರವರು ಈ ಅಂಚೆ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರಿಗೆ ನೆರವಾಗಲು ೧೦ ಮಂದಿ ಪೋಸ್ಟಲ್ ಸಹಾಯಕರು,ಐದು ಮಂದಿ ಪೋಸ್ಟ್ ಮ್ಯಾನ್‌ಗಳು, ಓರ್ವ ಜಿ.ಡಿ.ಎಸ್ ಪ್ಯಾಕರ್, ಓರ್ವ ಜಿ.ಡಿ.ಎಸ್ ಸ್ಟಾಂಪ್ ವೆಂಡರ್ ಮತ್ತಿತರ ಸಿಬ್ಬಂದಿವರ್ಗವಿದೆ. ಕೇಂದ್ರ ಸರ್ಕಾರದ ಸೇವಾ ನಿಯಮಗಳು, ಅಂಚೆಯ ನಿಯಮಗಳು, ಕೈಪಿಡಿ ಮುಂತಾದ ನಿಯಮ, ಅಧಿನಿಯಮಗಳನ್ನು ಈ ಕಛೇರಿಯು ಅನುಸರಿಸುತ್ತಿದೆ. ಬುಕ್ಕಿಂಗ್ ಆಫ್ ಮನಿ ಆರ್ಡರ್ಸ್, ಬುಕ್ಕಿಂಗ್ ಆಫ್ ಸ್ಪೀಡ್ ಪೋಸ್ಟ್, ರಿಜಿಸ್ಟರ್ಡ್ ಲೆಟರ್ಸ್, ಪಾರ್ಸೆಲ್ಸ್, ಎಕ್ಸ್‌ಪ್ರೆಸ್ ಪಾರ್ಸೆಲ್ ಪೋಸ್ಟ್, ಬಿಸಿನೆಸ್ ಪೋಸ್ಟ್, ಬಿಲ್ ಮೇಲ್ ಸರ್ವಿಸ್, ಪೋಸ್ಟಲ್ ಲೈಫ್ ಇನ್ಸೂರೆನ್ಸ್, ರೂರಲ್ ಪೋಸ್ಟಲ್ ಲೈಫ್ ಇನ್ಸೂರೆನ್ಸ್, ಲಾಂಗಿಸ್ಟಿಕ್ ಪೋಸ್ಟ್, ಪೋಸ್ಟ್ ಆಫೀಸ್ ಸೇವಿಂಗ್ ಬ್ಯಾಂಕ್‌ನಡಿ ಸೇವಿಂಗ್ಸ್ ಬ್ಯಾಂಕ್ ಅಕೌಂಟ್, ರೆಕರಿಂಗ್ ಅಕೌಂಟ್, ಮಂಥ್ಲೀ ಇನ್ಕಮ್ ಸ್ಕೀಮ್ ಅಕೌಂಟ್, ಒಂದು, ಎರಡು, ಮೂರು ಹಾಗೂ ನಾಲ್ಕು ವರ್ಷಗಳ ಟೈಮ್ ಡಿಪಾಝಿಟ್ ಅಕೌಂಟ್, ಸಿನಿಯರ್ ಸಿಟಿಜನ್ ಸೇವಿಂಗ್ಸ್ ಸ್ಕೀಂ ಅಕೌಂಟ್, ರಾಷ್ಟ್ರೀಯ ಉಳಿತಾಯ ಪತ್ರಗಳ ಮಾರಾಟ, ಕಿಸಾನ್ ವಿಕಾಸ ಪತ್ರ ಮಾರಾಟ, ಇ–ಎನೇಬಲ್ಡ್ ಸರ್ವಿಸಸ್ ಅಡಿಯಲ್ಲಿ ಟೆಲಿಫೋನ್ ಬಿಲ್, ಮೊಬೈಲ್ ಬಿಲ್, ಇನ್ಸೂರೆನ್ಸ್ ಪ್ರೀಮಿಯಂ, ಬಸ್, ರೈಲ್ವೆ ಟಿಕೇಟ್ ಬುಕ್ಕಿಂಗ್, ಎಲೆಕ್ಟ್ರಾನಿಕ್ಸ್ ಮನಿಆರ್ಡರ್ಸ್, ಇನ್‌ಸ್ಟಂಟ್ ಮನಿಆರ್ಡರ್ಸ್, ವೆಸ್ಟರ್ನ್ ಮನಿಆರ್ಡರ್ (ವಿದೇಶಿ ರಾಷ್ಟ್ರಗಳಿಂದ ಹಣ ಸ್ವೀಕರಿಸುವುದು), ಸೇಲ್ ಅಂಡ್ ರಿಸೀಟ್ ಆಫ್ ಕೆ.ಪಿ.ಎಸ್.ಸಿ ಅಪ್ಲಿಕೇಷನ್ ಫಾರ್ಮ್ಸ್, ಸ್ಪೀಡ್ ಪೋಸ್ಟ್,

ಪಾಸ್ ಪೋರ್ಟ್ಸರ್ವಿಸ್ ಮತ್ತಿತರ ಸೇವೆಗಳಲ್ಲೂ ತೊಡಗಿದೆ. ಅಧೀಕ್ಷಕರು, ಅಂಚೆ ಕಛೇರಿ ನಂಜನಗೂಡು ವಿಭಾಗ, ನಂಜನಗೂಡುರವರು ಈ ಕಛೇರಿಯ ಮೇಲಧಿಕಾರಿಗಳಾಗಿದ್ದಾರೆ.

## ಆದಾಯ ತೆರಿಗೆ ಇಲಾಖೆ

ಕೇಂದ್ರ ಸರ್ಕಾರದ ಕಂದಾಯ ಮೂಲಗಳಲ್ಲೊಂದಾದ ತೆರಿಗೆ ಹಾಗೂ ಅದಕ್ಕೆ ಸಂಬಂಧಿಸಿದ ತೆರಿಗೆ ನಿಯಮಗಳನ್ನು ಜಾರಿಗೊಳಿಸುವ ಉದ್ದೇಶದೊಂದಿಗೆ ಚಾಮರಾಜನಗರದಲ್ಲಿ ಆದಾಯ ತೆರಿಗೆ ಅಧಿಕಾರಿಯ ಕಛೇರಿ ಮೇ ಒಂದು, ೨೦೦೩ರಂದು ಆರಂಭಗೊಂಡಿತು. ಈ ಕಛೇರಿಯ ಅಧಿಕಾರ ವ್ಯಾಪ್ತಿಯು ಚಾಮರಾಜನಗರ ಜಿಲ್ಲೆಯ (ಕೊಳ್ಳೇಗಾಲ, ಗುಂಡ್ಲುಪೇಟೆ, ಚಾಮರಾಜನಗರ ಹಾಗೂ ಯಳಂದೂರು ತಾಲೂಕುಗಳು) ಎಲ್ಲಾ ತಾಲೂಕುಗಳನ್ನೊಳಗೊಂಡಿದೆ. ಆದಾಯ ತೆರಿಗೆ ಅಧಿಕಾರಿಗೆ ನೆರವಾಗಲು ಓರ್ವ ಇನ್ಸ್‌ಪೆಕ್ಟರ್, ಓರ್ವ ಹಿರಿಯ ತೆರಿಗೆ ಸಹಾಯಕ ಹಾಗೂ ಇನ್ನಿತರೆ ಸಿಬ್ಬಂದಿ ವರ್ಗವಿತ್ತು. ಕಾಯ್ದೆ ಹಾಗೂ ನಿಯಮಗಳಿಗನುಸಾರವಾಗಿ ಬೇರೆ ಬೇರೆ ವಿಧಾನಗಳಿಂದ ಈ ಆದಾಯ ತೆರಿಗೆಯನ್ನು ಸಂಗ್ರಹಿಸುವುದು ಹಾಗೂ ಜನರಲ್ಲಿ ಸಮಯಕ್ಕನುಗುಣವಾಗಿ ಸರಿಯಾದ ತೆರಿಗೆ ಸಂದಾಯದ ಮನೋಭಾವವನ್ನು ಜಾಗೃತಗೊಳಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಈ ಕಛೇರಿಯ ಕಾರ್ಯಚಟುವಟಿಕೆಗಳಾಗಿವೆ. ಆದಾಯ ತೆರಿಗೆ ಕಾಯ್ದೆ–೧೯೬೧, ಆದಾಯ ತೆರಿಗೆ ನಿಯಮಗಳು–೧೯೬೨, ಸಂಪತ್ತು ತೆರಿಗೆ ಕಾಯ್ದೆ–೧೯೫೬ ಹಾಗೂ ಉಡುಗೊರೆ (ಗಿಫ್ಟ್) ತೆರಿಗೆ ಅಧಿನಿಯಮ ೧೯೫೭ ಹಾಗೂ ಸರ್ಕಾರದ ಇತರ ಅಧಿನಿಯಮ, ನಿಯಮಗಳಡಿಯಲ್ಲಿ ಈ ಕಛೇರಿಯು ತನ್ನ ನಿತ್ಯದ ಕೆಲಸಕಾರ್ಯಗಳನ್ನು ಅನುಸರಿಸುತ್ತಿದೆ. ಖಾಯಂ ಖಾತೆ ಸಂಖ್ಯೆ (ಪರ್ಮನೆಂಟ್ ಅಕೌಂಟ್ ನಂಬರ್–PAN)ಯನ್ನು ಆದಾಯ ತೆರಿಗೆಗೆ ಒಳಪಡುವವರಿಗೆ ನೀಡಲಾಗುತ್ತಿದೆ. ಹೆಚ್ಚುವರಿ ಆಯುಕ್ತರು, ಆದಾಯ ತೆರಿಗೆ, ವಲಯ–೧, ಮೈಸೂರುರವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಕೇಂದ್ರ ಅಬಕಾರಿ ಇಲಾಖೆ

ನಂಜನಗೂಡು ತಾಲೂಕಿನ ತಾಂಡವಪುರದಲ್ಲಿ ಕೇಂದ್ರ ಅಬ್ಕಾರಿ ವಲಯ ಕಚೇರಿ ಇದ್ದು, ಇದರ ವ್ಯಾಪ್ತಿಗೆ ಚಾಮರಾಜನಗರ ಜಿಲ್ಲೆ ಒಳಪಡುತ್ತದೆ. ಅಬಕಾರಿ ಅಧೀಕ್ಷಕರು, ಈ ಕಚೇರಿಯ ಮುಖ್ಯಸ್ಥರಾಗಿದ್ದು, ಇವರ ನೆರವಿಗೆ ಒಬ್ಬ ಅಧೀಕ್ಷಕ, ಒಬ್ಬ ಇನ್ಸ್‌ಪೆಕ್ಟರ್ ಹಾಗೂ ಒಬ್ಬ ಸಿಪಾಯಿ (Sepoy) ಇದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ ಉತ್ಪಾದನೆಯಾಗುವ ವಸ್ತುಗಳ ಮೇಲಿನ ಉತ್ಪಾದನಾ ತೆರಿಗೆ ಸಂಗ್ರಹಣೆ ಈ ಕಚೇರಿಯ ಪ್ರಮುಖ ಚಟುವಟಿಕೆಯಾಗಿದೆ. ಕೇಂದ್ರ ಅಬಕಾರಿ ಕಾಯಿದೆ ೧೯೪೪ ಮತ್ತು ಕಾಲಾನುಕಾಲಕ್ಕೆ ಬದಲಾಗುವ ನಿಯಮಗಳು, ಕೇಂದ್ರ ಅಬಕಾರಿ ಸುಂಕ ೧೯೬೨ ಮತ್ತು ಕಾಲಕಾಲಕ್ಕೆ ಬದಲಾಗುವ ನಿಯಮಗಳನ್ನು ಈ ಕಚೇರಿಯು ತನ್ನ ನಿತ್ಯದ ಕಾರ್ಯಪಾಲನೆಯಲ್ಲಿ ಅನುಸರಿಸುತ್ತಿದೆ. ಸಹಾಯಕ ಆಯುಕ್ತರು, ಕೇಂದ್ರ ಅಬಕಾರಿ ಇಲಾಖೆ, ಮೈಸೂರು ೧೧೧ನೇ ವಿಭಾಗ, ಮೈಸೂರು ರವರು ಈ ಕಚೇರಿಯ ಮೇಲಧಿಕಾರಿಗಳಾಗಿರುತ್ತಾರೆ.

*******